2018 ಕ.ತೀ.ವ 1719

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎಸ್. ಬೋಪಣ್ಣ

## ಎಸ್.ಕೆ. ಗಂಗಾಧರ -ವಿರುದ್ಧ- ರಾಮಚಂದ್ರ*

ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 100ನೇ ಪ್ರಕರಣದ ಮೇರೆಗಿನ ನಿಯತ ಎರಡನೇ ಅಪೀಲು

ಶ್ರೀ ಬಿ. ಎಂ. ಕೃಷ್ಣ -ವಿರುದ್ಧ- ದಿನಾಂಕ 01.07.2004 ರಂದು ಓ.ಎಸ್. ಸಂ.133/2004ರಲ್ಲಿ ದಾವೆಯನ್ನು ದಾಖಲು ಮಾಡಿದ್ದಾನೆ. ಆ ದಾವೆಯು ಈ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವಾಗ ದಿನಾಂಕ: 02.07.2004 ರಂದು ಜಪ್ತಿಯ ಷರತ್ತು ಆದೇಶವನ್ನು ನೀಡಲಾಗಿದೆ. ಆ ದಾವೆಯನ್ನು ಅಂತಿಮವಾಗಿ 01.02.2008 ರಂದು ಡಿಕ್ರಿ ಮಾಡಲಾಗಿದೆ.

ಕಾರ್ಯನಿರ್ವಾಹಕ ನ್ಯಾಯಾಲಯ, ಆದೇಶ ದಿನಾಂಕ: 31.7.2010ರ ಮೂಲಕ ಆ ಅರ್ಜಿಯನ್ನು ತಿರಸ್ಕರಿಸಿದೆ.

ಐ.ಎ. ಸಂ.4 ಮತ್ತು 5ನ್ನು ನಿಶಾನೆ ಸಂ.42/2008ರಲ್ಲಿ ಆದೇಶ ದಿನಾಂಕ 31.07.2010ನ್ನು ಆರ್.ಎ. ಸಂ.195/2010ರಲ್ಲಿ ಆದೇಶ ದಿನಾಂಕ: 18.01.2011ರ ಆದೇಶವನ್ನು ಸಹ ರದ್ದುಗೊಳಿಸಲಾಗಿದೆ. ತತ್ಪರಿಣಾಮವಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 58, 59 ಮತ್ತು 97ನೇ ನಿಯಮಗಳ ಆದೇಶ 21ರ ಅಡಿಯಲ್ಲಿ ಸಲ್ಲಿಸಲಾದ ಐ.ಎ. ಸಂ.4 ಮತ್ತು 5ನ್ನು ಅಂಗೀಕರಿಸಲಾಗಿದೆ.

ಪಕ್ಷಕಾರರು ತಮ್ಮ ಸ್ವಂತ ವೆಚ್ಚಗಳನ್ನು ಭರಿಸುವುದು.

*ನಿಯತ ಎರಡನೇ ಅಪೀಲು ಸಂಖ್ಯೆ: 265/2011, ದಿನಾಂಕ 13ನೇ ಏಪ್ರಿಲ್, 2015.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. 1993 (3) ಎಸ್‌ಸಿಸಿ 291*<br>*ವನ್ನಾರಕಲ್ ಕಲಾಲರೆಲ್ ಶ್ರೀಧರನ್*<br>*–ವಿರುದ್ಧ– ಚಂದ್ರಮಾತ್ ಬಾಲಕೃಷ್ಣನ್*<br>ಮತ್ತು ಇನ್ನೊಬ್ಬರು | *(ಉಲ್ಲೇ) 8* |
| *2.* ಎಐಆರ್ 1920 ಮದ್ರಾಸ್ 748 (ಎಫ್‌ಬಿ)<br>ಎನ್.ಎನ್.ಎಲ್. ರಾಮಸ್ವಾಮಿ ಚೆಟ್ಟಿಯಾರ್<br>–ವಿರುದ್ಧ– ಮಲ್ಲಪ್ಪ ರೆಡ್ಡಿಯಾರ್ | (ಉಲ್ಲೇ) 12 |
| 3. ಎಐಆರ್ 1963 ಎಸ್‌ಸಿ 1150<br>ಸಿ. ಅಬ್ದುಲ್ ಶುಕೂರ್ ಸಾಹೇಬ್ –ವಿರುದ್ಧ–<br>ಆರ್ಜಿ ಪಾಪಾ ರಾವ್ (ಮೃತ)<br>ಕಾನೂನು ಸಮ್ಮತ ವಾರಸುದಾರರು ಮತ್ತು ಇತರರು | (ಉಲ್ಲೇ) 13 |
| 4. ಎಐಆರ್ 1986 ಕೆಎಆರ್ 225<br>ಬಸವೇಗೌಡ ಮತ್ತು ಇತರರು –ವಿರುದ್ಧ–<br>ಎಸ್. ನಾರಾಯಣ ಸ್ವಾಮಿ ಕಾನೂನು ಸಮ್ಮತ<br>ವಾರಸುದಾರರು ಮತ್ತು ಇತರರು | (ಉಲ್ಲೇ) 16 |
| 5. (2003) 8 ಎಸ್‌ಸಿಸಿ 319<br>ರಾಮಚಂದ್ರ ಸಿಂಗ್ –ವಿರುದ್ಧ– ಸಾವಿತ್ರಿದೇವಿ<br>ಮತ್ತು ಇತರರು | (ಉಲ್ಲೇ) 21 |

ಅಪೀಲುದಾರರ ಪರ : ಶ್ರೀ ಬಿ.ಕೆ. ಮಂಜುನಾಥ್–ವಕೀಲರು
ಪ್ರತ್ಯಪೀಲುದಾರರ ಪರ:ಮೆ॥ ಎಂ. ರಾಮ್‌ಭಟ್ ಮತ್ತು ಶ್ರೀಪಾದ ಅಸೋಸಿಯೇಟ್ಸ್ ಪರವಾಗಿ, ಶ್ರೀ ಪ್ರಸನ್ನ ಬಿ.ಆರ್. – ವಕೀಲರು

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎ.ಎಸ್. ಬೋಪಣ್ಣ:**

ಇಲ್ಲಿನ ಅಪೀಲುದಾರನು, ತನ್ನ ಮಾರಾಟಗಾರ ಶ್ರೀ ಬಿ.ಎಂ. ಕೃಷ್ಣನಿಂದ, ಭದ್ರಾವತಿ ನಗರಸಭೆಯ, ಸ್ಥಳೀಯ ಪರಿಮಿತಿಯೊಳಗೆ ಬರುವ ಮನೆ ಸ್ವತ್ತು ಸಂ.1092, ಖಾತಾ ಸಂ.1066ನ್ನು ಖರೀದಿಸಿ, ದಿನಾಂಕ: 12.04.2007ರಂದು ಮಾಡಿಕೊಂಡ ಕ್ರಯಪತ್ರವನ್ನು ದಿನಾಂಕ 01.07.2004 ರಂದು ನೋಂದಣಿ ಮಾಡಿಸಿಕೊಂಡಿರುತ್ತಾನೆ. ಇಲ್ಲಿನ ಪ್ರತ್ಯರ್ಜಿದಾರನು, ಹಣವನ್ನು ವಸೂಲಿ ಮಾಡುವುದಕ್ಕಾಗಿ ಸದರಿ ಶ್ರೀ ಬಿ.ಎಂ. ಕೃಷ್ಣ ವಿರುದ್ಧ ದಿನಾಂಕ: 01.07.2004 ರಂದು ಓ.ಎಸ್. ಸಂ.133/2004ರಲ್ಲಿ ದಾವೆಯನ್ನು ಸಲ್ಲಿಸಿರುತ್ತಾನೆ. ಇಲ್ಲಿನ ಪ್ರತ್ಯರ್ಜಿದಾರನು ಸದರಿ ದಾವೆಯಲ್ಲಿ, ತೀರ್ಪಿನ ನಿರೀಕ್ಷೆಯಲ್ಲಿರುವ ಸ್ವತ್ತಿನ ಜಪ್ತಿಯನ್ನು ಕೋರಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 5ನೇ ನಿಯಮದ ಕ್ರಮಾದೇಶ 38ರ ಅಡಿಯಲ್ಲಿ ಐ.ಎ.ನ್ನು ಸಲ್ಲಿಸಿರುತ್ತಾನೆ. ಈ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ದಾವೆಗೆ ದಿನಾಂಕ: 02.07.2004 ರಂದು ಜಪ್ತಿಯ ಷರತ್ತುಬದ್ಧ ಆದೇಶವನ್ನು ನೀಡಲಾಗಿರುತ್ತದೆ. ದಾವೆಯನ್ನು, ಅಂತಿಮವಾಗಿ ದಿನಾಂಕ: 01.02.2008 ರಂದು ಡಿಕ್ರಿ ಮಾಡಲಾಗಿದೆ.

2. ತದನುಸಾರವಾಗಿ, ಇಲ್ಲಿನ ಪ್ರತ್ಯರ್ಜಿದಾರನಿಗೆ, ತೀರ್ಪು ಋಣಿ ಶ್ರೀ ಬಿ.ಎಂ. ಕೃಷ್ಣ ವಿರುದ್ಧ ನಿಶಾನೆ ಸಂ.42/2008ರಲ್ಲಿನ ಜಾರಿ ನಡಾವಳಿಗಳನ್ನು ವಿಧಿಸಲಾಗಿದೆ. ಮೇಲೆ ಹೇಳಿದ ಸ್ವತ್ತನ್ನು ಈಗಾಗಲೇ ಜಪ್ತಿ ಮಾಡಲಾಗಿರುವುದರಿಂದ, ಜಾರಿ ನ್ಯಾಯಾಲಯವು ದಿನಾಂಕ: 24.01.2009 ರಂದು ಸ್ಥಳದಲ್ಲೇ ಮಾರಾಟ ಮಾಡಲು ಆದೇಶಿಸಿದ್ದು ನ್ಯಾಯಾಲಯವು ದಿನಾಂಕ: 21.02.2009 ರಂದು ಮಾರಾಟ ಮಾಡಿರುತ್ತದೆ. ಇದು ಈ ಹಂತದಲ್ಲಿರುವಾಗ ಈ ಸ್ವತ್ತಿನ ಮಾಲೀಕನಾದ ಇಲ್ಲಿನ ಅಪೀಲುದಾರನು ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದ ಓದಿನೊಂದಿಗೆ XXI ನೇ ಕ್ರಮಾದೇಶದ 58 ಮತ್ತು 97ನೇ ನಿಯಮಗಳ

ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸುವ ಮೂಲಕ ಆಕ್ಷೇಪಣೆಗಾರನಾಗಿ ನ್ಯಾಯಾಲಯದ ಮುಂದೆ ಮಾಹಿತಿ ಕೋರಿ ಹಾಜರಾಗಿದ್ದಾನೆ. ಇಲ್ಲಿನ ಪ್ರತ್ಯರ್ಜಿದಾರನು ಅದನ್ನು ವಿರೋಧಿಸಿದ್ದಾನೆ. ಇದನ್ನು ಪರಿಗಣಿಸಿದ ತರುವಾಯ ಜಾರಿ ನ್ಯಾಯಾಲಯವು, ದಿನಾಂಕ 31.07.2010ರ ಆದೇಶದ ಮೂಲಕ ಆ ಅರ್ಜಿಯನ್ನು ತಿರಸ್ಕರಿಸಿದೆ. ಆರ್.ಎ. ಸಂ.195/2010ರಲ್ಲಿ ಅಧೀನ ಅಪೀಲು ನ್ಯಾಯಾಲಯದ ಮುಂದೆ, ಅಪೀಲುದಾರನು ಬಾಧಿತನಾಗಿ ಕ್ಲೇಮು ಮಾಡಿದ್ದಾನೆ. ಪರಿಗಣನೆಯ ಮೇಲೆ, ಅಧೀನ ಅಪೀಲು ನ್ಯಾಯಾಲಯವು, ಆದೇಶ ದಿನಾಂಕ 18.01.2011ರ ಆದೇಶದ ಮೂಲಕ ಈ ಅಪೀಲನ್ನು ವಜಾಗೊಳಿಸಿದೆ. ಆದ್ದರಿಂದ, ಅಪೀಲುದಾರನು, ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಎರಡನೇ ಅಪೀಲಿನಲ್ಲಿ ಈ ನ್ಯಾಯಾಲಯದ ಮುಂದೆ ಅಪೀಲನ್ನು ಸಲ್ಲಿಸಿರುತ್ತಾರೆ.

3. ಈ ಅಪೀಲನ್ನು ಅಂಗೀಕರಿಸುವಾಗ ಈ ನ್ಯಾಯಾಲಯವು, ಈ ಮುಂದಿನ ಕಾನೂನಿನ ಮುಖ್ಯವಾದ ಪ್ರಶ್ನೆಯನ್ನು ರೂಪಿಸಿರುತ್ತದೆ.

ಮಾರಾಟ ಒಪ್ಪಂದ ಪತ್ರಕ್ಕೆ ಅನುವರ್ತಿಯಾದಂಥ ನ್ಯಾಯಾಲಯ ಆದೇಶದ ಮೂಲಕ ಪ್ರಶ್ನಿತ ಜಮೀನಿನ ಜಫ್ತಿಯು, ಖರೀದಿದಾರನ (ಮಾರಾಟ–ಒಪ್ಪಂದ ಪತ್ರದ ಪ್ರಕಾರ) ಹಕ್ಕನ್ನು ಸ್ಥಗಿತಗೊಳಿಸುತ್ತದೆಯೆ ಹಾಗೂ ಅನುವರ್ತಿ ಲಗತ್ತಿನ ಪರಿಣಾಮ ಏನಾಗಿರುತ್ತದೆ ?

4. ಅಂತಿಮವಾಗಿ, ಅಧೀನ ಅಪೀಲು ನ್ಯಾಯಾಲಯವು, ಸಿವಿಲ್ ಪ್ರಕ್ರಿಯಾ ಸಂಹಿತೆಯು 64ನೇ ಪ್ರಕರಣವು ಮಾತ್ರ ಪ್ರಸ್ತುತ ಪ್ರಕರಣದಲ್ಲಿ ಸಮುಚಿತವಾದುದಾಗಿರುತ್ತದೆಂಬುದನ್ನು ಗಮನಿಸಿದ್ದಾಗ್ಯೂ, ಉಪಬಂಧವನ್ನು ಸರಿಯಾಗಿ ಅರ್ಥೈಸಿಕೊಳ್ಳದಿರುವುದು ಸಮರ್ಥನೀಯವಾಗಿರುತ್ತದೆಯೇ ಹಾಗೂ ಮುಂದುವರೆದು ಸಾಲಗಾರರು ಸದರಿ ಪ್ರಕರಣದಲ್ಲಿ ಉದ್ದೇಶಿಸಲಾದ ಯಾವುದೇ ದಾವೆಯನ್ನು ಸಲ್ಲಿಸದಿದ್ದಾಗ್ಯೂ ಪ್ರಸ್ತುತ ಜಾರಿ ನಡಾವಳಿಗಳಲ್ಲಿ ಸ್ವತ್ತು ವರ್ಗಾವಣೆ ಅಧಿನಿಯಮ (ಇನ್ನು ಮುಂದೆ ಸಂಕ್ಷಿಪ್ತತೆಗಾಗಿ ಟಿ.ಪಿ. ಅಧಿನಿಯಮ ಎಂದು ಕರೆಯಲಾಗಿದೆ)ದ 53ನೇ ಪ್ರಕರಣವನ್ನು ಅನ್ವಯಿಸಿರುವುದು ಸಮರ್ಥನೀಯವಾಗಿದೆಯೇ ಎಂಬುದಕ್ಕೆ

ಸಂಬಂಧಿಸಿದಂತೆ ಪರಿಗಣನೆಯು ಪರಿಣಾಮಕಾರಿಯಾಗಿರಬೇಕಾಗಿರುತ್ತದೆ. ಸ್ವತ್ತು ವರ್ಗಾವಣೆ ಅಧಿನಿಯಮದ 3ನೇ ಪ್ರಕರಣವು ಅನ್ವಯವಾದಲ್ಲಿ ಕೂಡ, ವರ್ಗಾವಣೆಯ ವಾಸ್ತವಾಂಶಗಳು ಸಿಂಧುವಾದವುಗಳೇ ಅಥವಾ ಇಲ್ಲವೆ ಎಂಬುದನ್ನು ಪರಿಗಣಿಸಬೇಕಾಗಿರುತ್ತದೆ.

5. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಬಿ.ಕೆ. ಮಂಜುನಾಥ್ ಮತ್ತು ಪ್ರತ್ಯರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಪ್ರಸನ್ನ ಬಿ.ಆರ್. ಇವರುಗಳ ವಾದಗಳನ್ನು ನಾನು ಆಲಿಸಿದ್ದೇನೆ ಮತ್ತು ಕೆಳ ನ್ಯಾಯಾಲಯದಿಂದ ಸ್ವೀಕರಿಸಿದ ದಾಖಲೆಗಳು ಸೇರಿದಂತೆ ಅಪೀಲು ಪತ್ರಗಳನ್ನು ಪರಿಶೀಲಿಸಿದ್ದೇನೆ.

6. ಒಟ್ಟಾರೆಯಾಗಿ, ಪರಿಗಣನೆಯ ಸ್ವರೂಪವನ್ನು ಯಥಾ ದೃಷ್ಟಿಕೋನದಲ್ಲಿ ನಿರ್ವಹಿಸಲು, ಅಪೀಲುದಾರನು, ದಾವೆಯ ಪಕ್ಷಕಾರನಾಗಿರುವುದಿಲ್ಲ ಮತ್ತು ಜಫ್ತಿಯ ಆದೇಶವನ್ನು ಅವನ ವಿರುದ್ಧ ಮಾಡಿರುವುದಿಲ್ಲ. ಆದರೆ ಅಪೀಲುದಾರನು ಖರೀದಿ ಮಾಡಲಾದ ಆ ಸ್ವತ್ತಿನ ಸಂಬಂಧದಲ್ಲಿ ತನ್ನ ಮಾರಾಟಗಾರನ ವಿರುದ್ಧವಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿರುತ್ತದೆ. ಆ ಸಂಗತಿಯ ಜೊತೆಗೆ, ಆಕ್ಷೇಪಣಾಕಾರನಾದ ಅಪೀಲುದಾರನು, ಜಫ್ತಿಯ ಆದೇಶದ ದಿನಾಂಕಕ್ಕೆ ಮುಂಚೆ ಮಾರಾಟ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ ಎಂಬ ಸಂಗತಿಯ ಪರಿಗಣನೆಗೆ ಸಂಬಂಧಿಸಿದಂತೆ ಅವನು ನಿಜವಾದ ಖರೀದಿದಾರನಾಗಿದ್ದಾನೆಂಬುದನ್ನು ವಾದಿಸುವಂತೆ ಕೋರಿದ್ದು, ಆ ದೃಷ್ಟಿಯಿಂದ ಅದರ ಕಾನೂನು ಪರಿಣಾಮ ಏನು ಎಂದು ವಿಷಯವನ್ನು ನಿರ್ಧರಿಸುವುದಕ್ಕಾಗಿ ವಿವರಣೆಗಳನ್ನು ತರಿಸಿಕೊಳ್ಳಲಾಗಿರುತ್ತದೆ. ಆದ್ದರಿಂದ, ಕ್ರಯಪತ್ರವನ್ನು, ಸ್ವತಃ ಜಫ್ತಿಯ ದಿನಾಂಕದ ತರುವಾಯದ ದಿನದಂದು ಬರೆದು ಕೊಡಲಾಗಿದ್ದು, ಪರಿಗಣನೆಗಾಗಿ ಮಾತ್ರವಾಗಿರುವುದಿಲ್ಲವೆಂಬುದು ವಾಸ್ತವಾಂಶವಾಗಿದೆ. ಜಫ್ತಿಯು ಆದೇಶವು ಇಲ್ಲಿನ ಅಪೀಲುದಾರನ ತಿಳುವಳಿಕೆಯಲ್ಲಿರಲಿ ಅಥವಾ ಇಲ್ಲದಿರಲಿ ಅದು ಪರಿಗಣಿಸಬೇಕಾದ ಒಂದು ಆಯಾಮವೇ ಆಗಿರುತ್ತದೆ.

7. ಮೂಲತಃ ಸಿವಿಲ್ ಪ್ರಕ್ರಿಯಾ ಸಂಹಿತೆಯ 64ನೇ ಪ್ರಕರಣದ ಉಪಬಂಧಕ್ಕೆ ವಿರುದ್ಧವಾಗಿರುವಂಥ ವರ್ಗಾವಣೆಗಳು ಶೂನ್ಯವಾಗಿರುತ್ತವೆಂದು ಅದರಲ್ಲಿ ಉಪಬಂಧಿಸಿರುವುದರಿಂದ ಆ ಉಪಬಂಧಗಳ ಬಾಧಕಗಳೊಳಗೆ ಅಪೀಲುದಾರನು ಖರೀದಿಸಿದ ಸ್ವತ್ತು ಬರುವಂಥದಾಗಿದ್ದು, ವರ್ಗಾವಣೆಗೆ ಸಂಬಂಧಿಸಿದ ಪರಿಗಣನೆಯನ್ನು ಅದು ಅಗತ್ಯಪಡಿಸುತ್ತದೆ:

> *64. ಜಪ್ತಿಯಾದ ಸ್ವತ್ತನ್ನು ಮಾರಾಟ ಮಾಡಬೇಕೆಂದು ತಮ್ಮ ಉತ್ಪತ್ತಿಯನ್ನು ಹಕ್ಕುದಾರನಾದ ವ್ಯಕ್ತಿಗೆ ಸಂದಾಯ ಮಾಡಬೇಕೆಂದು ಆದೇಶಿಸಲು ಅಧಿಕಾರ.– ಡಿಕ್ರಿಯನ್ನು ಅಮಲ್ಜಾರಿ ಮಾಡುತ್ತಿರುವ ಯಾವುದೇ ನ್ಯಾಯಾಲಯವು, ತಾನು ಜಪ್ತಿ ಮಾಡಿದ ಮತ್ತು ಮಾರಾಟಕ್ಕೆ ಗುರಿಯಾಗತಕ್ಕ ಯಾವುದೇ ಸ್ವತ್ತನ್ನು ಅಥವಾ ಡಿಕ್ರಿಯನ್ನು ಸಮಾಧಾನಪಡಿಸಲು ಅವಶ್ಯವೆಂದು ಕಾಣಬಹುದಾದಂಥ ಅದರ ಭಾಗವನ್ನು ಮಾರಾಟ ಮಾಡತಕ್ಕದ್ದೆಂದು ಮತ್ತು ಅಂಥ ಮಾರಾಟದ ಉತ್ಪತ್ತಿಯನ್ನು ಅಥವಾ ಅದರ ಸಾಕಷ್ಟು ಭಾಗವನ್ನು ಅದನ್ನು ಪಡೆಯಲು ಡಿಕ್ರಿಯ ಮೇರೆಗೆ ಹಕ್ಕುದಾರನಾದ ಪಕ್ಷಕಾರನಿಗೆ ಸಂದಾಯ ಮಾಡತಕ್ಕದ್ದೆಂದು ಆದೇಶ ಮಾಡಬಹುದು.*
>
> *(2) ಈ ಪ್ರಕರಣದಲ್ಲಿ ಏನೇ ಇದ್ದರೂ ಜಪ್ತಿಗೆ ಮೊದಲು ಮಾಡಿಕೊಂಡ ಹಾಗೂ ನೋಂದಾಯಿಸಿಕೊಂಡ ಅಂಥ ವರ್ಗಾವಣೆ ಅಥವಾ ವಶಾವಣೆಗೆ ಸಂಬಂಧಿಸಿದ ಯಾವುದೇ ಕರಾರನ್ನು ಅನುಸರಿಸಿ ರೂಪಿಸಿದ ಜಪ್ತಿ ಮಾಡಲಾದ ಸ್ವತ್ತಿನ ಅಥವಾ ಅದರಲ್ಲಿ ಯಾವುದೇ ಹಿತಾಸಕ್ತಿಯ ಖಾಸಗಿ ವರ್ಗಾವಣೆ ಅಥವಾ ವಶಾವಣೆಯು ಅನ್ವಯವಾಗತಕ್ಕದ್ದು.*

8. ಮೇಲೆ ಗಮನಿಸಲಾದ 64ನೇ ಪ್ರಕರಣದ (2)ನೇ ಉಪ–ಪ್ರಕರಣವು, ಜಪ್ತಿಯ ಆದೇಶಕ್ಕೆ ಮುಂಚೆಯೇ ನಮೂದಿಸಿದಂಥ ಕರಾರನನ್ನುಸರಿಸಿ ಮಾರಾಟವನ್ನು ಮಾಡಲಾಗಿರುವುದರ ಪ್ರಾಮುಖ್ಯತೆ ಏನು ಎಂಬುದನ್ನು ಸೂಚಿಸಿರುತ್ತದೆ. ಪ್ರಸಕ್ತ ಪ್ರಕರಣದಲ್ಲಿ, ದಿನಾಂಕ: 01.07.2004ರಂದು ನೊಂದಾಯಿತ ಮಾರಾಟ ಒಪ್ಪಂದವನ್ನು ಮಾಡಿಕೊಂಡು ದಿನಾಂಕ 02.07.2004ರಂದು ಜಪ್ತಿ ಆದೇಶವನ್ನು ಹೊರಡಿಸಲಾಗಿರುತ್ತದೆಂಬುದರಲ್ಲಿ ಯಾವುದೇ ವಿವಾದವಾಗುವುದಿಲ್ಲ. ಇದೇ ಸ್ಥಿತಿಗತಿಯನ್ನು ಅಪೀಲುದಾರನ ಪರ ಮಾನ್ಯ ನ್ಯಾಯವಾದಿಯು ಉದಾಹರಿಸಿದ, ***ವನ್ನಾರಕಲ್ ಕಲಾಲತಿಲ್ ಶ್ರೀಧರನ್ –ವಿರುದ್ಧ– ಚಂದ್ರಮಾತ್ ಬಾಲಕೃಷ್ಣನ್ ಮತ್ತು ಇನ್ನೊಬ್ಬರು***[1] ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪರಿಗಣಿಸಿದ್ದು ಅದರಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 64ನೇ ಪ್ರಕರಣವು, ಜಪ್ತಿ ಮಾಡುವವನ್ನು ಸಂರಕ್ಷಿಸಲು ಉದ್ದೇಶಿಸಿದ್ದಾಗ್ಯೂ, ತರುವಾಯ ಹಸ್ತಾಂತರಣವು ಜಪ್ತಿಯ ಮುಂಚಿನ ಮಾರಾಟಕ್ಕಾಗಿನ ಒಪ್ಪಂದವನ್ನು ಅನುಸರಿಸಿದ್ದಲ್ಲಿ, ಅದರಿಂದ ಉದ್ಭವಿಸಿದ ಕರಾರು ಜನ್ಯ ಬಾಧ್ಯತೆಯನ್ನು, ಜಪ್ತಿ ಮಾಡುವವನ ಹಕ್ಕುಗಳ ಮೇಲೆ ಚಾಲ್ತಿಯಲ್ಲಿರುವಂತೆ ಅಂಗೀಕರಿಸಬೇಕಾಗಿರುತ್ತದೆಂದು ಅಭಿಪ್ರಾಯಪಟ್ಟಿದೆ. ಜಪ್ತಿ ಮಾಡುವವನು ಆ ಹೊಣೆಗಾರಿಕೆಯನ್ನು ಹಾಗೂ ತೀರ್ಪು ಋಣಿಯ ನಿರುಪಾಧಿಕ ಸ್ವತ್ತು ಹೇಗೆ ಉಳಿದಿರುತ್ತದೆಯೋ ಹಾಗೆ ಮಾರಾಟಕ್ಕೆ ಸ್ವತ್ತನ್ನು ತರಲು ಮುಂದುವರೆಯುವುದನ್ನು ಅಲಕ್ಷಿಸಬಾರದು ಹಾಗಾಗಿ, ಪ್ರಸ್ತುತ ಪ್ರಕರಣದಲ್ಲಿ ಅಧೀನ ನ್ಯಾಯಾಲಯಗಳು ಪ್ರಸ್ತುತ ವಾಸ್ತವಾಂಶಗಳಲ್ಲಿ ಹೀಗೆ ಮಾಡದಿದ್ದಾಗ್ಯೂ, ಡಿಕ್ರಿದಾರನ ಪ್ರಯೋಜನಕ್ಕೆ ಸದರಿ ಉಪಬಂಧವನ್ನು ಅನ್ವಯಿಸಿ, ದೋಷವೆಸಗಿರುತ್ತವೆ.

9. ಉತ್ತಮ ತೀರ್ಪಿಗಾಗಿ ಮತ್ತೊಂದು ಆಯಾಮದಲ್ಲಿ ಸ್ವತ್ತು ವರ್ಗಾವಣೆ ಅಧಿನಿಯಮದ 53ನೇ ಪ್ರಕರಣದಲ್ಲಿ ಒಳಗೊಂಡ ಉಪಬಂಧದ ಪರಿಣಾಮವನ್ನು ಪರಿಗಣಿಸುವ ದೃಷ್ಟಿಯಲ್ಲಿ, ಅದನ್ನು ಮತ್ತೊಮ್ಮೆ ಇಲ್ಲಿ ಹಾಜರುಪಡಿಸುವುದು ಸಮುಚಿತವಾದುದಾಗಿದ್ದು, ಅದು ಈ ಮುಂದಿನಂತಿರುತ್ತದೆ:

1. 1993 (3) ಎಸ್‌ಸಿಸಿ 291

"53. ಮೋಸದ ಮೂಲಕ ವರ್ಗಾವಣೆ.– (1) ವರ್ಗಾವಣೆ ಕರ್ತನ ಲೇಣಿದಾರರನ್ನು ವಿಫಲಗೊಳಿಸುವ ಅಥವಾ ಕಾಯಿಸುವ ಉದ್ದೇಶದಿಂದ ಮಾಡಲಾದ ಸ್ಥಿರ ಸ್ವತ್ತಿನ ಪ್ರತಿಯೊಂದು ವರ್ಗಾವಣೆಯು, ಹಾಗೆ ವಿಫಲಗೊಂಡ ಅಥವಾ ಕಾಯ್ದ ಯಾವನೇ ಲೇಣಿದಾರನ ಆಯ್ಕೆಯ ಮೇರೆಗೆ ಶೂಣ್ಯಕರಣೀಯವಾಗತಕ್ಕದ್ದು.

ಈ ಉಪ–ಪ್ರಕರಣದಲ್ಲಿರುವುದಾವುದೂ, ಸದ್ಭಾವನೆಯಿಂದ ಮತ್ತು ಪ್ರತಿಫಲಕ್ಕಾಗಿ ವರ್ಗಾವಣೆ ಪಡೆದವನ ಹಕ್ಕುಗಳಿಗೆ ಧಕ್ಕೆಯುಂಟು ಮಾಡತಕ್ಕದ್ದಲ್ಲ.

ಈ ಉಪ–ಪ್ರಕರಣದಲ್ಲಿರುವುದಾವುದೂ ದಿವಾಳಿಗೆ ಸಂಬಂಧಿಸಿದ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಭಾದಕವನ್ನುಂಟು ಮಾಡತಕ್ಕದ್ದಲ್ಲ.

ವರ್ಗಾವಣೆ ಕರ್ತನ ಲೇಣಿದಾರರನ್ನು ವಿಫಲಗೊಳಿಸುವ ಅಥವಾ ಕಾಯಿಸುವ ಉದ್ದೇಶದಿಂದ ವರ್ಗಾವಣೆಯನ್ನು ಮಾಡಲಾಗಿದೆ ಎಂಬ ಕಾರಣದಿಂದ ವರ್ಗಾವಣೆಯನ್ನು ಶೂನ್ಯಗೊಳಿಸಲು ಒಬ್ಬ ಲೇಣಿದಾರನು (ಆ ಪದವು ಡಿಕ್ರಿ ಧಾರಕನನ್ನು ಅವನು ತನ್ನ ಡಿಕ್ರಿ ಅಮಲ್ಜಾರಿಗೆ ಅರ್ಜಿ ಸಲ್ಲಿಸಿರಲಿ ಅಥವಾ ಸಲ್ಲಿಸದಿರಲಿ ಒಳಗೊಳ್ಳುತ್ತದೆ) ಹೂಡಿದ ದಾವೆಯ ಎಲ್ಲ ಲೇಣಿದಾರರ ಪರವಾಗಿ ಅಥವಾ ಪ್ರಯೋಜನಕ್ಕಾಗಿ ಹೂಡಿದುದಾಗಿರತಕ್ಕದ್ದು.

(2) ತರುವಾಯದ ವರ್ಗಾವಣೆ ಪಡೆದವನನ್ನು ಮೋಸಗೊಳಿಸುವ ಉದ್ದೇಶದಿಂದ ಪ್ರತಿಫಲವಿಲ್ಲದೆ ಮಾಡಿದ ಸ್ಥಿರ ಸ್ವತ್ತಿನ ಪ್ರತಿಯೊಂದು ವರ್ಗಾವಣೆಯು, ಅಂಥ ವರ್ಗಾವಣೆ ಪಡೆದವನ ಆಯ್ಕೆಯ ಮೇರೆಗೆ ಶೂನ್ಯಕರಣೀಯವಾಗತಕ್ಕದ್ದು.

(3) ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ ಪ್ರತಿಫಲವಿಲ್ಲದೆ ಮಾಡಿದ ಯಾವ ವರ್ಗಾವಣೆಯು, ಪ್ರತಿಫಲಕ್ಕಾಗಿ ತರುವಾಯದ ವರ್ಗಾವಣೆ ಮಾಡಲಾಯಿತೆಂಬ ಕಾರಣ ಮಾತ್ರದಿಂದಲೇ, ಮೋಸಗೊಳಿಸುವ ಉದ್ದೇಶದಿಂದ ಮಾಡಲಾಗಿದ್ದಿತೆಂದು ಭಾವಿಸತಕ್ಕದ್ದಲ್ಲ.

10. ಇದರ ಪರಿಶೀಲನೆಯು, ಸದರಿ ಉಪಬಂಧದ ಮೂಲಕ, ಬದ್ಧತೆಯಿರದಂತೆ ತಪ್ಪಿಸಬಹುದಾದ ಸ್ಥಿರ ಸ್ವತ್ತಿನ ಯಾವುದೇ ಮೋಸದ ವರ್ಗಾವಣೆಯನ್ನು ಭದ್ರಪಡಿಸಲು ಸಾಲ ಮಾಡುವವನ ಹೆಸರಿನಲ್ಲಿ ಆ ಹಕ್ಕನ್ನು ಸೃಷ್ಟಿಸಲಾಗಿದೆ ಎಂಬುದನ್ನು ಸೂಚಿಸಲಾಗಿರುತ್ತದೆ. ಈ ಉಪಬಂಧದಿಂದ, ಋಣಿಯಿಂದ ಮಾಡಿದ ಪ್ರತಿಯೊಂದು ವರ್ಗಾವಣೆಯು, ಆರಂಭದಿಂದಲೇ ಶೂನ್ಯವಾಗಿರುವುದಿಲ್ಲ, ಆದರೆ ಸ್ಥಿರ ಸ್ವತ್ತುವಿನ ಅಂಥ ವರ್ಗಾವಣೆಯನ್ನು, ಸಾಲಕೊಡುವವರನ್ನು ವಿಫಲಗೊಳಿಸಲು ಅಥವಾ ವಿಳಂಬಗೊಳಿಸಲು ಮಾಡಲಾಗಿದೆಯೆಂಬುದನ್ನು ಸಾಬೀತುಗೊಳಿಸಿದಲ್ಲಿ ಸಾಲ ಕೊಡುವವರಿಂದ ಹೂಡಿದ ದಾವೆಯ ಮೇಲೆ ಮಾತ್ರ ಶೂನ್ಯವಾಗಿರುತ್ತದೆಯೆಂಬುದು ಸ್ಪಷ್ಟವಾಗಿದೆ ಅಂಥ ದಾವೆಯನ್ನು ಸಾಲ ಕೊಡುವವರಿಂದ ಹೂಡುವವರೆಗೆ ಮತ್ತು ಬದ್ಧವಾಗದೇ ಘೋಷಿಸಬಹುದಾದ ಅದನ್ನು ಪಡೆದುಕೊಳ್ಳುವ ಮೂಲಕ ವರ್ಗಾವಣೆಯನ್ನು ತಪ್ಪಿಸುವವರೆಗೂ, ವರ್ಗಾವಣೆಯು ಸಾಲ ಕೊಡುವವರ ವಿರುದ್ಧ ಸಹ ಕಾನೂನಿನಲ್ಲಿ ಸಿಂಧುವಾಗಿ ಉಳಿದುಕೊಂಡಿರುತ್ತದೆ. ಹಾಗಾಗಿ, ಸಾಲ ಕೊಡುವವರೆಗೆ ಲಭ್ಯವಾಗುವ ಆಯ್ಕೆಯನ್ನು ಅದು ಸದ್ಭಾವನೆಯಿಂದ ಮತ್ತು ಪರಿಗಣನೆಗಾಗಿರುತ್ತದೆಂದು ತೋರಿಸುವುದರ ಮೂಲಕ, ವರ್ಗಾವಣೆಕಾರನು, ವರ್ಗಾವಣೆಯನ್ನು ಸಮರ್ಥಿಸಿಕೊಂಡಿರುವಾಗ, ಅದರಲ್ಲಿ ಹೇಳಲಾದ ಸಂದರ್ಭಗಳಲ್ಲಿ ಚಲಾಯಿಸಬಹುದಾಗಿರುತ್ತದೆ. ಆ ವಿಷಯದ ಈ ಅಂಶವನ್ನು ದೃಷ್ಟಿಯಲ್ಲಿಟ್ಟುಕೊಂಡಲ್ಲಿ ವರ್ಗಾವಣೆಕಾರನು ಆಕ್ಷೇಪಕನಾಗಿರುವಲ್ಲಿ ವ್ಯವಹರಣೆಗಳಲ್ಲಿ ಪರಿಗಣನೆಗಾಗಿ ವಿವಾದಾಂಶ ಉದ್ಭವಿಸಿದೆಯೆಂಬ ಸಂಗತಿಯನ್ನು ಗಮನಿಸಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21ರ 58 ಮತ್ತು 97ನೇ ನಿಯಮಗಳಡಿಯಲ್ಲಿ ಅರ್ಜಿಯನ್ನು ದಾಖಲು ಮಾಡಲಾಗಿರುತ್ತದೆ ಹಾಗೂ ವರ್ಗಾವಣೆಯ ಸಿಂಧುತ್ವವನ್ನು

ಪರಿಗಣಿಸಿರುವುದರಿಂದ, ಇಲ್ಲಿ ಹೇಳಿದ ವಾದವು, ಅದಕ್ಕೆ ಸಂಬಂಧಪಟ್ಟಂತೆ ದಾಖಲು ಮಾಡಿದ ಸ್ವತಂತ್ರ ದಾವೆಯಲ್ಲದೇ ಬದ್ಧವಾಗಿರದ ಮಾರಾಟ ವ್ಯವಹರಣೆಯನ್ನು ತಪ್ಪಿಸಲು ಸ್ವತಃ ಆಸ್ತಿ ವರ್ಗಾವಣೆ ಅಧಿನಿಯಮದ 53ನೇ ಪ್ರಕರಣವನ್ನು ಕೋರುವುದರ ಮೂಲಕ ಸಾಲ ಕೊಡುವವರ ಪೈಕಿ ಒಬ್ಬರಾದ ಡಿಕ್ರಿದಾರನಿಂದ ಅರ್ಜಿಯ ಆಕ್ಷೇಪಣೆಗಳನ್ನು ಎತ್ತಲಾಗಿದೆಯೇ ಎಂಬುದಾಗಿದೆ.

11. ಸ್ವತ್ತು ವರ್ಗಾವಣೆ ಅಧಿನಿಯಮದ 53(1)ರ ನಾಲ್ಕನೇ ಭಾಗವನ್ನು ಉಲ್ಲೇಖಿಸುವುದರೊಂದಿಗೆ ಅಪೀಲುದಾರನ ಪರ ಮಾನ್ಯ ನ್ಯಾಯವಾದಿಯು ಅಂಥ ವರ್ಗಾವಣೆಗಳು, ಶೂನ್ಯವಾಗಿರಬೇಕೆಂದು ಹೇಳಲಾಗಿರುವುದರಿಂದ ಆ ದಾವೆಯನ್ನು ದಾಖಲಿಸುವುದರ ಮೂಲಕ ಶೂನ್ಯವಾಗಿದೆಯೆಂದು ಘೋಷಿಸಬಹುದಾಗಿರುತ್ತದೆ ಮತ್ತು ಅಂಗೀಕಾರವಾಗಬಹುದಾದ ನೋಟೀಸ್‌ನ್ನು ಮಾತ್ರ, ಆಕ್ಷೇಪಕನ ಮೂಲಕ ಕ್ಲೇಮು ಮಾಡಲಾದ ಹಕ್ಕನ್ನು ಅದರಲ್ಲಿರುವಂತೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21ರ 58ನೇ ನಿಯಮದ ಮೇರೆಗೆ ಅರ್ಜಿಯನ್ನು ನಿರ್ಧರಿಸುವಾಗ ಹಾಗೇ ಸ್ವಾಧೀನ ವ್ಯವಹರಣೆಗಳನ್ನು ಮಾಡಲಾಗದೆಂದು, ವಾದಿಸಿರುತ್ತಾರೆ.

12. ಇಂಥ ಪರಿಸ್ಥಿತಿಯಲ್ಲಿ, ಈ ತಿದ್ದುಪಡಿಗೆ ಮುಂಚಿನ ಉಪಬಂಧದಂತೆ ಮತ್ತು ಸದರಿ ಉಪಬಂಧವನ್ನು ಬಿಟ್ಟು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21ರ 63ನೇ ನಿಯಮದ ಮೇರೆಗೆ ದಾವೆಯಲ್ಲಿ ಮಾಡಿದ ಪ್ರತಿವಾದಕ್ಕೆ ಸಂಬಂಧಿಸಿದ ಉಲ್ಲೇಖದಲ್ಲಿ ***ಎನ್.ಎನ್.ಎಲ್. ರಾಮಸ್ವಾಮಿ ಚೆಟ್ಟಿಯಾರ್ –ವಿರುದ್ಧ– ಮಲ್ಲಪ್ಪ ರೆಡ್ಡಿಯಾರ್***[2], ಪ್ರಕರಣದಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯದ ಪೂರ್ಣ ಪೀಠದ ಮುಂದೆ ವಿವಾದಾಂಶ ಉದ್ಭವಿಸಿದೆಯೆಂಬುದು ನನಗೆ ಕಂಡು ಬಂದಿರುತ್ತದೆ. ಅಂಥ ದಾವೆ ಸಿವಿಲ್ ಪ್ರಕ್ರಿಯಾ ಸಂಹಿತೆಯ XXI ಕ್ರಮಾದೇಶದ 58ನೇ ನಿಯಮದಡಿಯಲ್ಲಿ ಮಾಡಿದ ಆದೇಶದ ನ್ಯಾಯ ನಿರ್ಣಯದ ವಿರುದ್ಧ ಸಲ್ಲಿಸಲು ಲಭ್ಯವಾಗಿರುತ್ತದೆ. ಪೂರ್ಣ ಪೀಠಕ್ಕೆ ಉಲ್ಲೇಖಿಸಿದ ಪ್ರಶ್ನೆಯು, ಜಪ್ತಿ ಮಾಡಲಾದ ಸಾಲ ಕೊಡುವವನಿಗೆ, ಅಂದರೆ, ಅಂಥ ದಾವೆಯಲ್ಲಿ ಪ್ರತಿವಾದಿಯು,

2. ಎಐಆರ್ 1920 ಮದ್ರಾಸ್ 748 (ಎಫ್‌ಬಿ)

ವರ್ಗಾವಣೆಯನ್ನು, ಸ್ವತ್ತು ವರ್ಗಾವಣೆ ಅಧಿನಿಯಮದ 53ನೇ ಪ್ರಕರಣ, ಆಪಾದಿತ ಕ್ಲೇಮುದಾರನ ಮೇಲೆ ಅವಲಂಬಿಸಿದ್ದಾನೆಂಬ ಪ್ರತಿವಾದವನ್ನು ವಾದಿಸಲಾಗಿದೆಯೇ ಅಥವಾ ಅದನ್ನು ತಪ್ಪಿಸುವುದಕ್ಕಾಗಿ ಅವನು ಹೂಡಬಹುದಾದ ದಾವೆಯಲ್ಲಿ ಮಾತ್ರ ಅಂಥ ವಾದವನ್ನು ಎತ್ತಲಾಗಿದೆಯೇ, ಎಂಬುದಾಗಿರುತ್ತದೆ. ಸದರಿ ಉಲ್ಲೇಖಕ್ಕೆ ಉತ್ತರಿಸುವಲ್ಲಿ, ಪೂರ್ಣಪೀಠವು, ವರ್ಗಾವಣೆಯನ್ನು ತಪ್ಪಿಸಿ ದಾವೆಯನ್ನು ಸ್ವತಃ ಸಾಲಕೊಡುವವನು ಸಲ್ಲಿಸದೆ, ಸ್ವತ್ತು ವರ್ಗಾವಣೆ ಅಧಿನಿಯಮದ 53ನೇ ಪ್ರಕರಣದಡಿಯಲ್ಲಿ ಅವನಿಗಾದ ವರ್ಗಾವಣೆಯ ಮೋಸದ ಹಸ್ತಾಂತರವೆಂದು ತಿರಸ್ಕರಿಸಲಾದಂಥ ತೀರ್ಪುಋಣಿಯಿಂದ ಪರಭಾರೆ ಪಡೆದವನು ದಾವೆಗೆ ಪ್ರತಿಯಾಗಿ ವಾದಿಸಲು ಹೊಂದಿಕೊಂಡ ಡಿಕ್ರಿಧಾರಕನು ಮುಕ್ತವಾಗಿರುತ್ತಾನೆಂದು ಅಭಿಪ್ರಾಯಪಟ್ಟಿರುತ್ತದೆ.

13. ಇಂಥದೇ ಪ್ರಶ್ನೆಯು ***ಸಿ. ಅಬ್ದುಲ್ ಶುಕೂರ್ ಸಾಹೇಬ್ –ವಿರುದ್ಧ– ಅರ್ಜಿ ಪಾಪಾ ರಾವ್ (ಮೃತ) ಕಾನೂನು ಸಮ್ಮತ ವಾರಸುದಾರರು ಮತ್ತು ಇತರರು***[3], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಪರಿಗಣನೆಗಾಗಿ ಉದ್ಭವಿಸಿರುತ್ತದೆ. ಈ ಹಿಂದೆ ಪ್ರಸ್ತಾಪಿಸಲಾದ ಮದ್ರಾಸ್ ಉಚ್ಚ ನ್ಯಾಯಾಲಯದ ತೀರ್ಪನ್ನು ಪರಿಗಣನೆಗೆ ತೆಗೆದುಕೊಂಡ ತರುವಾಯ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಅದನ್ನು ಅನುಮೋದಿಸಿದೆ ಮತ್ತು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

> "(29) ಮಾನ್ಯ ನ್ಯಾಯಾಧೀಶರುಗಳು, ಈ ಕುರಿತಾದ ಅವರ ತೀರ್ಮಾನ ಹಾಗೂ ಒಂದು ಅಭಿಪ್ರಾಯವನ್ನು ರೂಪಿಸಲು ಅನಾವಶ್ಯಕವೆಂದು ನಾವು ಪರಿಗಣಿಸಿದಂಥ ಹಲವಾರು ಕಾರಣಗಳನ್ನು ಆಧರಿಸಿರುತ್ತಾರೆ. ಆದರೆ ನಾವೆಲ್ಲಾ ಅದರೊಂದಿಗೆ ಇಡೀ ಒಪ್ಪಂದದಲ್ಲಿರುತ್ತೇವೆಂದು ಹೇಳಬೇಕಾಗುತ್ತದೆ. ಆದ್ದರಿಂದ

3. ಎಐಆರ್ 1963 ಎಸ್‌ಸಿ 1150

ಈ ವಿಚಾರದಲ್ಲಿ ಯಾವುದೇ ಹುರುಳಿರುವುದಿಲ್ಲ. ಪ್ರಕರಣ 53(1)ರಲ್ಲಿ ಏನೇ ಇದ್ದರೂ, ವಾದಿಯ ಹೆಸರಿನಲ್ಲಿ ಮಾರಾಟವಾಗಿದೆಯೆಂದು ನಿಯಮ 63ರ, XXIರ ಕ್ರಮಾದೇಶದ ಮೇರೆಗೆ ಸಾರಾಂಶವನ್ನು ರದ್ದುಗೊಳಿಸಲು ಆ ದಾವೆಗೆ ಜಫ್ತಿ ಮಾಡುವವ–ಸಾಲಕೊಡುವವನ ಪ್ರತಿವಾದವನ್ನು ಮೂಲತಃ ಸೇರಿಸದಿರಲು, ಈ ಮುಂಚೆ ಹೇಳಲಾದ ಉಪಬಂಧದಲ್ಲಿ ನಿರ್ದಿಷ್ಟಪಡಿಸಲಾದ ಮೋಸದ ಮಾರ್ಗವನ್ನು ನಿರರ್ಥಗೊಳಿಸಲಾಗಿದೆ ಮತ್ತು ತಿದ್ದುಪಡಿಯುನ್ನು, ಒಪ್ಪಿಕೊಂಡಿರುವಂತೆ, ಆ ವಿಷಯುದಲ್ಲಿ ಬದಲಾವಣೆ ಮಾಡಿರುವುದಿಲ್ಲ.

(30). 53(1)ರ ತಿದ್ದುಪಡಿ ಪ್ರಕರಣದ ಮೂರನೇ ಕಂಡಿಕೆಯು ಕಾನೂನುನಲ್ಲಿರುವಂತೆ ಪರಿಣಾಮಕಾರಿಯಾಗಿ ಬದಲಾವಣೆ ಮಾಡಲಾಗಿದೆ ಮತ್ತು ತದನಂತರದ ವರ್ಗಾವಣೆಗಳನ್ನು, ಪ್ರಕರಣ 53(1)ರ 1ನೇ ಕಂಡಿಕೆ ಮೇರೆಗೆ ಶೂನ್ಯವಾಗಿದ್ದು, ತಾನಾಗಿಯಾಗಲೀ ಮತ್ತು ಇತರೇ ಸಾಲಕೊಡುವವರ ಪರವಾಗಿಯಾಗಲೀ ದಾವೆ ಹೂಡಿದ ವಾದಿಯಂತೆ ಸಾಲ ಕೊಡುವವನನ್ನು ವಿಫಲಗೊಳಿಸಲು ಅಥವಾ ಒಳ ಹೊಕ್ಕು ಪರಿಶೀಲಿಸುವುದರ ಮೂಲಕ ದಾಖಲು ಮಾಡಿದ ದಾವೆಗಳನ್ನು ಮಾತ್ರ ತಪ್ಪಿಸಬಹುದಾಗಿದೆಯೆಂದು ವಾದಿಸಲಾಗಿದೆ. ಈ ಆಕ್ಷೇಪಣೆಯುಲ್ಲಾದರೂ ಯಾವುದೇ ಹುರುಳಿಲ್ಲವೆಂದು ನಾವು ಪರಿಗಣಿಸಿದ್ದೇವೆ.

(31). ನಾವು, ಮೊದಲೇ ತಿದ್ದುಪಡಿಯ ಉದ್ದೇಶವನ್ನು ಉಲ್ಲೇಖಿಸತಕ್ಕದ್ದಾಗಿರುತ್ತದೆ. ತಿದ್ದುಪಡಿಗೆ ಮುಂಚೆ ನೀಡಲಾದ ಹೆಚ್ಚಿನ ಸಂಖ್ಯೆಯ ತೀರ್ಪುಗಳನ್ನು 53(1)ರ ಅಡಿಯಲ್ಲಿ ವರ್ಗಾವಣೆಯುನ್ನು ತಪ್ಪಿಸುವುದಕ್ಕಾಗಿ ಸಾಲ ಕೊಡುವವರು ಸಲ್ಲಿಸುತ್ತಿದ್ದ ದಾವೆಗಳು, ಪ್ರಾತಿನಿಧಿಕ ಕ್ರಮವಾಗಿದ್ದವೆಂಬುದನ್ನು ಆಧರಿಸಿ ಎಲಿಜಬೆತ್ ಪರಿನಿಯಮದ 5ನೇ ಅಧ್ಯಾಯದ ಪ್ರಕರಣ

53(1)ರ ಉಲ್ಲೇಖದೊಂದಿಗೆ ಈ ಮುಂದಿನ ಕೆಲವು ಇಂಗ್ಲಿಷ್ ಪ್ರಕರಣಗಳನ್ನು ನಿರ್ಧರಿಸಲಾಗಿರುತ್ತದೆ. ಅಂಥ ದಾವೆಯಲ್ಲಿ ಪ್ರಾತಿನಿಧಿಕ ಸಾಮರ್ಥ್ಯದ ಅಗತ್ಯತೆಯಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುವ ಸಂಕ್ಷಿಪ್ತ ಪ್ರಕ್ರಿಯೆಗಳಲ್ಲಿ ಯಾರ ವಿರುದ್ಧ ಜಪ್ತಿ ಮಾಡಲಾದ ಡಿಕ್ರಿದಾರನು ತಂದಂಥ ಹಾಗೂ ನಿಯಮದ 61 ಕ್ರಮಾದೇಶ 21 ರಡಿಯಲ್ಲಿ ದಾವೆಯನ್ನು ಸಂಕ್ಷಿಪ್ತ ಆದೇಶದಿಂದ ರದ್ದುಪಡಿಸಿದಾಗ ಹಲವಾರು ತೀರ್ಪುಗಳನ್ನು ವಿನಾಯತಿಯನ್ನು ಮಾನ್ಯಗೊಳಿಸಬೇಕಾಗುತ್ತದೆ. ಆದಾಗ್ಯೂ, ಈ ಅಂಶದ ಮೇಲಿನ ತೀರ್ಮಾನಗಳು ಏಕರೂಪವಾಗಿರುವುದಿಲ್ಲ. ಅದು ಕೇವಲ ಏಕರೂಪ ನಿಯಮವಾಗಿದ್ದು, ಈ ವೈರುದ್ಯದ ತೀರ್ಮಾನಗಳನ್ನು ತಪ್ಪಿಸಲು ಮೂರನೆ ಕಂಡಿಕೆಯನ್ನು ಸೇರಿಸಲಾಗಿದ್ದು, ಇದರಿಂದ ನಿಯಮದ ತಿದ್ದುಪಡಿಯ ತರುವಾಯ ಸಾಲ ಕೊಡುವವನು ಸಲ್ಲಿಸಿದ ದಾವೆಯನ್ನು ಪ್ರಾತಿನಿಧಿಕ ಸಾಮರ್ಥ್ಯದಲ್ಲಿರುವಂತೆ ತರಬೇಕಾಗಿದ್ದು, ಇದು ಇತರೇ ದಾವೆಗಳಿಗೆ ಹೇಗೋ ಹಾಗೆ ಕ್ರಮಾದೇಶ 21ರ ನಿಯಮ 63ರ ಸಂಕ್ಷಿಪ್ತ ಕ್ರಮಾದೇಶವನ್ನು ರದ್ದುಗೊಳಿಸುವಷ್ಟರ ಮಟ್ಟಿಗೆ ಅನ್ವಯವಾಗುತ್ತದೆ. ದಾವೆಯ ಪ್ರತಿವಾದಕ್ಕೆ ಉಲ್ಲೇಖಿಸಿದಂಥ 53(1)ನೇ ತಿದ್ದುಪಡಿಯಾದ 53(1)ನೇ ಪ್ರಕರಣದ ನಿಬಂಧನೆಗಳಲ್ಲಿನ ಯಾವುದನ್ನೂ ಸೂಚಿಸಿರುವುದಿಲ್ಲ. ವಾಸ್ತವವಾಗಿ, ಮಾನ್ಯ ನ್ಯಾಯವಾದಿಗಳು, ಪ್ರಾತಿನಿಧಿಕ ಸಾಮರ್ಥ್ಯದಲ್ಲಿರುವಂಥ ಪ್ರತಿವಾದದ, ಸೋಲಲ್ಪಟ್ಟ ಜಪ್ತಿ ಮಾಡಲ್ಪಟ್ಟ ಸಾಲಗಾರನು 53(1)ನೇ ಪ್ರಕರಣದಲ್ಲಿ ಪ್ರತಿವಾದವನ್ನು ಮಾಡಬಹುದಾಗಿದ್ದು, ಈ ನಿವೇದನೆಯಲ್ಲಿ ಮಾನ್ಯ ವಕೀಲರು ಮಾಡಿರುವ ವಾದವು ಸರಿಯಾಗಿದೆಯೆಂದು ನಾವು ಪರಿಗಣಿಸಿದ್ದೇವೆ.

ಈ ಉಪಬಂಧದಿಂದ ವಾದಿಯು ಆ ದಾವೆಯನ್ನು ದಾಖಲು ಮಾಡಿದ್ದಲ್ಲಿ ಹೇಗೋ ಹಾಗೆ ಅದನ್ನು ನಿರೂಪಿಸತಕ್ಕದ್ದು. ಪ್ರತಿವಾದಿಯು ತನ್ನ ಸಂದರ್ಭದಲ್ಲಿ ಶೂನ್ಯವಾಗಿರುವಂಥ ಮಾರಾಟದ

> ಸಿಂಧುತ್ವವನ್ನು ಪ್ರಶ್ನಿಸುವಂತಿಲ್ಲವೆಂದು ಅಭಿಪ್ರಾಯಪಡುವ ಮೂಲಕ ಯಾವುದೇ ಕಾನೂನು ಪ್ರಕ್ರಿಯೆಗಳು ನಮಗೆ ಕಂಡುಬಂದಿರುವುದಿಲ್ಲ. ಆದ್ದರಿಂದ ನಮಗೆ ಅಪೀಲುದಾರನ ಪರವಾಗಿ ವಾದಿಸಿದ ಕಾನೂನಿನ ಅಂಶವನ್ನು ತಿರಸ್ಕರಿಸಲು ಯಾವುದೇ ಹಿಂಜರಿಕೆ ಇರುವುದಿಲ್ಲ.
>
> (ಇದಕ್ಕೆ ನನ್ನಿಂದ ಒತ್ತು ನೀಡಲಾಗಿದೆ)

14. ಮೇಲೆ ಉಲ್ಲೇಖಿಸಲಾದ ತೀರ್ಮಾನಗಳಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ XXI ರ 58ನೇ ನಿಯಮದ ಅಡಿಯಲ್ಲಿನ ವ್ಯವಹರಣೆಗಳು, ಸಂಕ್ಷಿಪ್ತ ಸ್ವರೂಪದಲ್ಲಿದೆ ಎಂಬುದನ್ನು ಮತ್ತು ಪ್ರತಿವಾದ ಪರ್ಯಾಪ್ತತತೆಯನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆಯ XXIನೇ ಕ್ರಮಾದೇಶದ 58ನೇ ನಿಯಮದಡಿಯಲ್ಲಿ ಸಲ್ಲಿಸಿದ ಅರ್ಜಿಯಲ್ಲಿ ಆತ ವಿಫಲನಾದ ತರುವಾಯ ವರ್ಗಾವಣೆಕಾರನ ಮೂಲಕ ಸಲ್ಲಿಸಿದ ದಾವೆಯಲ್ಲಿ ತೆಗೆದುಕೊಂಡಿರುವಂತೆ ಅಭಿಪ್ರಾಯಪಟ್ಟಿರುವುದನ್ನು ಗಮನಿಸಲಾಗಿರುವಲ್ಲಿ ಯಾವುದೇ ಸಂದೇಹವಿಲ್ಲ. ಕ್ರಮಾದೇಶ XXIರ 63ನೇ ನಿಯಮವು ನಿರಸಿತವಾದ ತರುವಾಯ ಪರಿಪೂರ್ಣ ದಾವೆಯಲ್ಲಿನ ವಿಷಯದ ಪರಿಗಣನೆಯು ಲಭ್ಯವಾಗುವುದಿಲ್ಲವೆಂಬುದು ಸತ್ಯವಾದುದಾಗಿದೆ. ಆದಾಗ್ಯೂ, ಮೇಲೆ ಗಮನಿಸಲಾದ ತೀರ್ಪುಗಳ ಮೇಲೆ ನಡೆದ ಚರ್ಚೆಯನ್ನು ಗಣನೆಗೆ ತೆಗೆದುಕೊಂಡು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ XXIರ 58ನೇ ನಿಯಮದ ಮೇರೆಗೆ ಆಕ್ಷೇಪಕನಾಗಿ ಕಾರ್ಯನಿರ್ವಾಹಕ ನ್ಯಾಯಾಲಯದ ಮುಂದೆ ವರ್ಗಾವಣೆಕಾರನು ಬಂದಿರುವ ಸಂದರ್ಭದಲ್ಲಿ, ಪ್ರತಿವಾದದ ರೂಪದಲ್ಲಿ ಸ್ವತ್ತು ವರ್ಗಾವಣೆ ಅಧಿನಿಯಮದ 53ನೇ ಪ್ರಕರಣವನ್ನು, ಡಿಕ್ರಿದಾರ – ಸಾಲಕೊಡುವವನಿಗೆ ಅನ್ವಯಿಸಿದಲ್ಲಿ ಅದು ಸಾಕಷ್ಟಾಗುತ್ತದೆಂದೂ ಹಾಗೂ ಸಂಕ್ಷಿಪ್ತ ವ್ಯವಹರಣೆಗಳಿದ್ದಾಗ್ಯೂ, ಅರ್ಜಿಯನ್ನು ನಿಶ್ಚಿತವಾಗಿ ವಜಾಗೊಳಿಸಲು ಯಶಸ್ವಿಯಾಗಿ ಪಡೆದುಕೊಂಡ ಅಂಶಗಳನ್ನು ಮನವರಿಕೆ ಮಾಡಿಕೊಡಲಾಗಿದೆಯೆಂಬುದನ್ನು ಪರಿಗಣಿಸಿ ನಾನು ತೀರ್ಪು ನೀಡಿರುತ್ತೇನೆ. ಅರ್ಜಿಯನ್ನು ನಿರಾಕರಿಸಿದಲ್ಲಿ, ಕಾನೂನಿನಲ್ಲಿ ಉಪಬಂಧಿಸಲಾದಂತೆ ಅಂಥ ಆದೇಶಗಳ

3. ಎಐಆರ್ 1986 ಕೆಎಆರ್ 225

ವಿರುದ್ಧ ಎಲ್ಲಾ ಪರಿಹಾರೋಪಾಯವನ್ನು ಪಡೆದುಕೊಳ್ಳಲು ವರ್ಗಾವಣೆಕಾರನಿಗೆ ಮಾತ್ರವೇ ಸಂಬಂಧಪಟ್ಟದ್ದಾಗಿರುತ್ತದೆ. ಆದಾಗ್ಯೂ, ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಪ್ರತಿವಾದದಂತೆ ಸ್ವತ್ತು ವರ್ಗಾವಣೆ ಅಧಿನಿಯಮದ 53ನೇ ಪ್ರಕರಣವನ್ನು ಡಿಕ್ರಿದಾರನಿಗೆ ಅನ್ವಯಿಸಿದ ತರುವಾಯ ಸಹ, ಸಿವಿಲ್ ಪ್ರಕ್ರಿಯಾ ಸಂಹಿತೆಯ 58ನೇ ನಿಯಮದ ಕ್ರಮಾದೇಶ 21ರ ಅಡಿಯಲ್ಲಿನ, ಅರ್ಜಿಯನ್ನು ವರ್ಗಾವಣೆಕಾರನ ಹೆಸರಿನಲ್ಲಿ ಹಾಗೂ ಅಂಗೀಕರಿಸಿದಲ್ಲಿ ಡಿಕ್ರಿದಾರನ ವಿರುದ್ಧ ಅವನು ಸಾಲ ಕೊಡುವವನಾಗಿ, ಸ್ವತ್ತು ವರ್ಗಾವಣೆ ಅಧಿನಿಯಮದ 53(1)ನೇ ಪ್ರಕರಣದ ನಾಲ್ಕನೇ ಭಾಗದಲ್ಲಿ ಉಪಬಂಧಿಸಲಾದಂತೆ ಯುಕ್ತವಾಗಿ ರಚಿಸಲಾದ ದಾವೆಯನ್ನು ಸಲ್ಲಿಸುವ ಆಯ್ಕೆ ಅವಕಾಶವನ್ನು ಚಲಾಯಿಸಬಹುದಾಗಿರುತ್ತದೆ. ಹಾಗಾಗಿ, ಸ್ವತ್ತು ವರ್ಗಾವಣೆ ಅಧಿನಿಯಮದ 53ನೇ ಪ್ರಕರಣದ ಹಿನ್ನೆಲೆಯಲ್ಲಿ ವರ್ಗಾವಣೆಯ ಸಿಂಧುತ್ವವನ್ನು ಸಿವಿಲ್ ಪ್ರಕಿಯಾ ಸಂಹಿತೆಯ ಕ್ರಮಾದೇಶ XXIರ 58ನೇ ನಿಯಮದ ಮೇರೆಗಿನ ವ್ಯವಹರಣೆಗಳಲ್ಲಿ ಪರಿಗಣಿಸಲಾಗದು. ಆದರೆ, ಎಲ್ಲಾ ಸಂದರ್ಭಗಳ ಮೇರೆಗಿನ ದಾವೆಯಲ್ಲಿರುವಂತೆ ಮಾತ್ರ, ಅಂಗೀಕರಿಸಬಾರದು ಮತ್ತು ಆದೇಶಕ್ಕನುಸಾರವಾಗಿ ತಿರಸ್ಕರಿಸಲಾಗಿದೆಯೆಂಬುದು ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯ ವಾದವಾಗಿದೆ.

15. ಕಾನೂನಾತ್ಮಕ ಆಯಾಮದ ಹಿನ್ನೆಲೆಯಲ್ಲಿ ಮೇಲಿನ ನಿರ್ಣಯಕ್ಕೆ ಬಂದು, ಪ್ರಸ್ತುತ ವಾಸ್ತವಾಂಶಗಳಲ್ಲಿ, ವರ್ಗಾವಣೆಕಾರನು, ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ XXIರ 58ನೇ ನಿಯಮದಡಿಯಲ್ಲಿ ಅರ್ಜಿಯನ್ನು ದಾಖಲು ಮಾಡುವಲ್ಲಿ ವಿಫಲನಾಗಿದ್ದು, ಆತ ಕಾನೂನಿನಲ್ಲಿ ಉಪಬಂಧಿಸಲಾದ ಪರಿಹಾರವನ್ನು ಪಡೆದಿರುವುದು ಈ ನ್ಯಾಯಾಲಯದ ಮುಂದೆಯಿದ್ದು ಆ ದೃಷ್ಟಿಯಿಂದ, ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಕಾನೂನಿನ ಸಾರಭೂತವಾದ ಪ್ರಶ್ನೆಯನ್ನು ರೂಪಿಸಿ ಸ್ವತ್ತು ವರ್ಗಾವಣೆ ಅಧಿನಿಯಮದ 53ನೇ ಪ್ರಕರಣವನ್ನು ಅನ್ವಯಿಸಿದ್ದರೂ ಸಹ ಕಾರ್ಯನಿರ್ವಾಹಕ ನ್ಯಾಯಾಲಯವು ಮಾಡಿದಂಥ ನ್ಯಾಯನಿರ್ಣಯದ ಸರಿತನವನ್ನು ಇಲ್ಲಿ ಪರಿಗಣಿಸಬೇಕಾದ ಅವಶ್ಯಕತೆಯಿರುತ್ತದೆ.

16. ಆದ್ದರಿಂದ, ಅದರಲ್ಲಿ ಉದ್ಭವಿಸಿದ ವಾಸ್ತವಾಂಶಗಳನ್ನು ಆಧರಿಸುವುದು ಅವಶ್ಯಕವೆಂದು ಪರಿಗಣಿಸಿದಂಥ ರೀತಿಯು, ವರ್ಗಾವಣೆ ಪಡೆದವನು, ಸದ್ಭಾವನೆಯಿಂದ ಉತ್ತಮ ಪರಿಗಣನೆಗೆ ಸಂಬಂಧಪಟ್ಟ ಸ್ವತ್ತನ್ನು ಖರೀದಿಸಿದ್ದಾನೆಯೇ? ಹಾಗಿದ್ದಲ್ಲಿ, ಸ್ವತ್ತು ವರ್ಗಾವಣೆ ಅಧಿನಿಯಮದ 53(1)ನೇ ಪ್ರಕರಣದ ಎರಡನೇ ಭಾಗವು, ಈ ಪ್ರಕರಣದಲ್ಲಿ ಏನೇ ಒಳಗೊಂಡಿರದಿದ್ದರೂ, ಸದ್ಭಾವನೆಯಿಂದ ಮತ್ತು ಪರಿಗಣಿಸಿದ್ದಕ್ಕಾಗಿ ವರ್ಗಾವಣೆ ಪಡೆದವನ ಹಕ್ಕನ್ನು ದುರ್ಬಲಗೊಳಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ. ವಾಸ್ತವವಾಗಿ, ಸಾಲ ಕೊಡುವವನಿಂದ ಈ ದಾವೆಯನ್ನು ದಾಖಲು ಮಾಡುವುದಕ್ಕಾಗಿ ಈ ಉಪಬಂಧವನ್ನು ದೃಷ್ಟಿಯಲ್ಲಿಟ್ಟುಕೊಂಡು, ***ಬಸವೇಗೌಡ ಮತ್ತು ಇತರರು –ವಿರುದ್ಧ– ಎಸ್. ನಾರಾಯಣ ಸ್ವಾಮಿ ಕಾನೂನು ಸಮ್ಮತ ವಾರಸುದಾರರು ಮತ್ತು ಇತರರು***[3], ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು, ಘೋಷಣೆಗೆ ಸಂಬಂಧಿಸಿದಂತೆ ಸಾಲ ಕೊಡುವವನು ಸಲ್ಲಿಸಿದ ದಾವೆಯಲ್ಲಿ, ಋಣಿಯಿಂದ ಮಾಡಲಾದ ಸ್ವತ್ತುವಿನ ವರ್ಗಾವಣೆಯು ಮೋಸದಿಂದ ಕೂಡಿದ್ದು ಇದರಿಂದ ಅವರ ಮೇಲೆ ಯಾವ ಹೊಣೆಗಾರಿಕೆಯು ಇರುವುದಿಲ್ಲ; ವರ್ಗಾವಣೆ ಪಡೆದವನ ಸದ್ಭಾವನೆಯ ಇಚ್ಛೆಯನ್ನು ರುಜುವಾತು ಪಡಿಸುವ ಹೊಣೆಯು, ವ್ಯವಹರಣೆಯನ್ನು ಪ್ರಶ್ನಿಸಿದಂಥ ಸಾಲ ಕೊಡುವವನ ಮೇಲಿದೆ ಎಂದು ಅಭಿಪ್ರಾಯಪಟ್ಟಿದೆ. ಆದರೆ ವರ್ಗಾವಣೆಕಾರನ ಕಡೆಯಿಂದಾದ ಮೋಸವು ಸುಸ್ಥಾಪಿತವಾಗಿರುವಲ್ಲಿ, ಅಂದರೆ, 53(1)ನೇ ಪ್ರಕರಣದ ನಿಬಂಧನೆಗಳಲ್ಲಿನ ಹೊರತುಪಡಿಸಲಾದುದರೊಳಗೆ ವರ್ಗಾವಣೆ ಪಡೆದವನನ್ನು ವಿನಾಯಿತಿಯೊಳಗೆ ಬರುವ ವರ್ಗಾವಣೆ ಪಡೆದವನ ರುಜುವಾತುಪಡಿಸುವ ಭಾರವು ಅವನ ಮೇಲಿದ್ದು, ಅದರಲ್ಲಿ ಯಶಸ್ಸು ಪಡೆಯುವ ದೃಷ್ಟಿಯಿಂದ, ವರ್ಗಾವಣೆ ಪಡೆದವನು, ತಾನು ವರ್ಗಾವಣೆಕಾರನ ಯೋಜನೆಗೆ ಪಕ್ಷಕಾರನಾಗಿರುವುದಿಲ್ಲ ಹಾಗೂ ವರ್ಗಾವಣೆಯ ಪರಿಣಾಮಕಾರಿಯಾಗುವಂಥ ಉದ್ದೇಶವನ್ನು ಹಂಚಿಕೊಳ್ಳದೆ ವರ್ಗಾವಣೆಯ ವ್ಯವಹರಣೆಯು ಸಾಮಾನ್ಯವಾದುದೆಂದು ಪ್ರಾಮಾಣಿಕವಾಗಿ ನಂಬಿ ಮಾರಾಟವನ್ನು ಪಡೆದುಕೊಂಡಿರುತ್ತಾನೆಂಬುದನ್ನು ಸುಸ್ಥಾಪಿಸಬೇಕಾಗಿರುತ್ತದೆ.

17. ಪ್ರಸ್ತುತ ಪ್ರಕರಣದಲ್ಲಿ, ವರ್ಗಾವಣೆ ಪಡೆದವನು ಅರ್ಜಿಯನ್ನು ಸಲ್ಲಿಸಿರುವುದರಿಂದ, ಈತನನ್ನು ಪ್ರಾ.ಸಾ.1 ಆಗಿ ವಿಚಾರಣೆ ಮಾಡಲಾಗಿದ್ದು,

ಅದನ್ನು ಕಾನೂನಿನ ಒಳಾಂಶಗಳನ್ನು ಸುಸ್ಥಾಪಿಸಲು ಕಾನೂನಿನಲ್ಲಿ ವಿಧಿಸಿದ ಹೊಣೆಗಾರಿಕೆಯಿಂದ ದೂರ ಮಾಡಲಾಗುವುದಿಲ್ಲ. ವರ್ಗಾವಣೆಕಾರನ ಮಟ್ಟಿಗೆ, ತನ್ನ ತಿಳುವಳಿಕೆಯಂತೆ ಜಫ್ತಿಯ ಆದೇಶದ ತರುವಾಯ ತಾನು ಕ್ರಯಪತ್ರವನ್ನು ಬರೆದು ಕೊಟ್ಟಿರುತ್ತೇನೆಂಬುದು ಸ್ಪಷ್ಟವಾಗಿದ್ದು, ಆದರೆ ತೀರ್ಪಿಗೆ ಮೊದಲು ಜಫ್ತಿಯ ಆದೇಶದ ಪೂರ್ವದಲ್ಲಿ ಮಾರಾಟದ ನೋಂದಾಯಿತ ಒಪ್ಪಂದದಂತೆ ತಾನು ಕ್ರಯಪತ್ರವನ್ನು ಬರೆದು ಕೊಟ್ಟಿದ್ದಾನೆಂಬುದು ಸಹ ವಾಸ್ತವಾಂಶವಾಗಿದ್ದು, ಮಾರಾಟವು ಆತನು ಈ ಮುಂಚಿನ ಕರಾರಿನ ಪ್ರಕಾರವೇ ಇದ್ದು, ಅದನ್ನು ಆತ ಗೌರವಿಸಲು ಬದ್ಧನಾಗಿದ್ದಾನೆ. ಆದ್ದರಿಂದ ವರ್ಗಾವಣೆ ಪಡೆದವನಿಗೆ, ಕ್ರಯಪತ್ರವನ್ನು ಪಡೆದುಕೊಂಡ ದಿನಾಂಕದಂದು ಜಪ್ತಿಯಾಗುತ್ತದೆಂದು ತಿಳಿದಿತ್ತೇ ಅಥವಾ ಅವನು ವರ್ಗಾವಣೆಕಾರನ ಉದ್ದೇಶಿತ ಪಕ್ಷಕಾರನಾಗಿದ್ದನೇ ಮತ್ತು ಅವನು ಮೋಸ ಮಾಡುವ ಉದ್ದೇಶವನ್ನು ಹೇಳಿದ್ದನೇ ಎಂಬ ಪ್ರಶ್ನೆ ಉದ್ಭವಿಸಿರುತ್ತದೆ. ಪ್ರಾಸಾ.1 ಆಗಿ, ವರ್ಗಾವಣೆ ಪಡೆದವನು ತನ್ನ ಅಫಿಡಾವಿಟ್ಟನ್ನು ಸಲ್ಲಿಸಿ, ಅದರಲ್ಲಿ ಈತ ಒಪ್ಪಂದ ಪತ್ರವನ್ನು ನೋಂದಾಯಿತವಾದಂಥ 2,50,000/- ರೂಪಾಯಿಗಳ ಒಟ್ಟು ಮಾರಾಟ ಮೌಲ್ಯಕ್ಕೆ ಪ್ರತಿಯಾಗಿ 2,00,000/- ರೂಪಾಯಿಗಳ ಮೊಬಲಗನ್ನು ಸಂದಾಯ ಮಾಡಿರುವುದನ್ನು ದಿನಾಂಕ 01.07.2004 ರಂದು ತನ್ನ ಹೆಸರಿನಲ್ಲಿ ನೋಂದಾಯಿತವಾದ ಮಾರಾಟ ಒಪ್ಪಂದ ಪತ್ರದಲ್ಲಿ ಹೇಳಿರುತ್ತಾನೆ. ಬಾಕಿ 50,000/- ರೂಪಾಯಿಗಳನ್ನು ಸಂದಾಯ ಮಾಡಬೇಕೆಂದೂ ವರ್ಗಾವಣೆಕಾರನು, ಮೂರು ವರ್ಷಗಳ ಅವಧಿಯೊಳಗೆ ಕ್ರಯಪತ್ರವನ್ನು ಬರೆದು ಕೊಡಲು ಒಪ್ಪಿದ್ದಾನೆಯೆಂದು ಸಹ ಅವನು ಹೇಳಿದ್ದಾನೆ. ಅದಕ್ಕನುಸಾರವಾಗಿ, ಬಾಕಿ ಮೊತ್ತವನ್ನು, ಪಾವತಿಸಿದ್ದಾನೆ ಹಾಗೂ ಕ್ರಯಪತ್ರವನ್ನು ದಿನಾಂಕ 12.04.2007 ರಂದು ಬರೆದುಕೊಟ್ಟಿದ್ದಾನೆ.

18. ಆದ್ದರಿಂದ ಪರಿಗಣನೆಗೆ ಸಂಬಂಧಿಸಿದ ಪ್ರಾಮಾಣಿಕ ಖರೀದಿಯ ಆಧಾರದ ಮೇಲೆ ಸದರಿ ದಿನಾಂಕದಿಂದ ಆ ಸ್ವತ್ತು ತನ್ನ ಸ್ವಾಧೀನದಲ್ಲಿರಬೇಕೆಂದು ವರ್ಗಾವಣೆ ಪಡೆದವನು ಕ್ಲೇಮು ಮಾಡಿರುತ್ತಾನೆ. ಅರ್ಜಿಗೆ ಆಕ್ಷೇಪಣೆಯನ್ನು ಸಲ್ಲಿಸಿರುವುದರಿಂದ ಡಿಕ್ರಿದಾರನು ಪ್ರಾಸಾ.1, ಅಂಥ ನೋಟೀಸ್‌ನ್ನು ತಾನು ಸ್ವೀಕರಿಸಿರುವುದಿಲ್ಲ ಮತ್ತು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಪ್ರತಿಯ ಪ್ರಕಾರ ಸಹ ವಿಳಾಸವನ್ನು

ತಪ್ಪಾಗಿ ಹೇಳಲಾಗಿದೆಯೆಂದು ತಿಳಿಸಿ ದಿನಾಂಕ 16.08.2006ರ ನೋಟೀಸಿನ ಮೂಲಕ ಜಪ್ತಿಯ ಬಗೆಗೆ ವರ್ಗಾವಣೆ ಪಡೆದವನಿಗೆ ತಿಳಿಸಿರುತ್ತಾನೆ. ಹಾಗಾಗಿ, ಕ್ರಯಪತ್ರದ ದಿನಾಂಕದಂದೂ ಸಹ, ದಾವೆ ಅಥವಾ ಜಪ್ತಿಯ ಇತ್ಯರ್ಥದ ಬಗ್ಗೆ ತನಗೆ ತಿಳುವಳಿಕೆಯಿರುವುದಿಲ್ಲವೆಂದು ಕ್ಲೇಮು ಮಾಡಿರುತ್ತಾನೆ. ಪಾಟೀ ಸವಾಲಿನಲ್ಲಿ ಅವನು, ಆ ಸ್ವತ್ತಿಗಾಗಿ ಪಾವತಿಸಿದ ಸಮುಚಿತ ಮೌಲ್ಯಕ್ಕೆ ಸಂಬಂಧಪಟ್ಟಂತೆ ಸಮರ್ಥಿಸಿಕೊಂಡಿದ್ದು, ನೋಟೀಸ್‌ನ್ನು ತಾನು ಸ್ವೀಕರಿಸಿರುವುದಿಲ್ಲ ಮತ್ತು ಜಪ್ತಿಯ ಆದೇಶದ ಬಗ್ಗೆ ತನಗೆ ತಿಳಿದಿರುವುದಿಲ್ಲವೆಂಬುದನ್ನು ನಿರ್ವಹಿಸಿರುತ್ತಾನೆ. ವರ್ಗಾವಣೆಕಾರನು 10 ರಿಂದ 12 ವರ್ಷಗಳಿಂದ ತನಗೆ ತಿಳಿದವನೆಂದೂ ಇಬ್ಬರೂ ಒಂದೇ ಜಾತಿಯವರಾದರೂ, ಸಂಬಂಧಿಕರಾಗಿರಲಿಲ್ಲವೆಂದೂ ಹೇಳಿರುತ್ತಾನೆ. ವರ್ಗಾವಣೆಕಾರನೊಂದಿಗೆ ಆತ ಷಾಮೀಲಾಗಿ, ಮಾರಾಟ ವ್ಯವಹರಣೆಯನ್ನು ಮಾಡಿರುತ್ತೀರೆಂಬ ವಾದವನ್ನು ನಿರಾಕರಿಸಿರುತ್ತಾನೆ. ಮಾರಾಟದ ಹಣವನ್ನು ಶ್ರೀ ಪ್ರಕಾಶ್‌ರವರ ಉಪಸ್ಥಿತಿಯಲ್ಲಿಯೇ ನಗದು ರೂಪದಲ್ಲಿ ಸಂದಾಯ ಮಾಡಿದುದಾಗಿ ಸಹ ಅವನು ಹೇಳಿದ್ದಾನೆ.

19. ಸದರಿ ಶ್ರೀ ಪ್ರಕಾಶ್‌ರನ್ನು ಪ್ರಾಸಾ.2 ಆಗಿ ವಿಚಾರಣೆ ಮಾಡಲಾಗಿರುತ್ತದೆ. ಪ್ರಾಸಾ.2 ತಮ್ಮ ಸಾಕ್ಷ್ಯದಲ್ಲಿ ವರ್ಗಾವಣೆಕಾರ ಮತ್ತು ವರ್ಗಾವಣೆ ಪಡೆದವರಿಬ್ಬರೂ ತನಗೆ ತಿಳಿದವರೆಂದೂ, ಅವರಿಬ್ಬರ ವ್ಯವಹಾರದಲ್ಲಿ ತಾನು ಮಧ್ಯಸ್ಥಿಕೆ ವಹಿಸಿದೆನೆಂದೂ, ತನ್ನ ಉಪಸ್ಥಿತಿಯಲ್ಲಿ ಮಾರಾಟ ಮಾಡಿದ ಮೊಬಲಗನ್ನು ಸಂದಾಯ ಮಾಡಿದರೆಂದೂ ತಿಳಿಸಿರುತ್ತಾರೆ. ತಮ್ಮ ಪಾಟೀ ಸವಾಲಿನಲ್ಲಿ, ಅವನು, ದಸ್ತಾವೇಜಿಗೆ ಸಹಿ ಮಾಡುವಾಗ ಮತ್ತು ನೋಂದಣಿ ಮಾಡುವಾಗ ಹಾಜರಿರಲಿಲ್ಲವೆಂದು ಹೇಳಿರುವುದರಲ್ಲಿ ಯಾವುದೇ ಸಂದೇಹವಿರುವುದಿಲ್ಲ. ವರ್ಗಾವಣೆ ಪಡೆದವನಿಗೆ ನೆರವು ನೀಡಲು ಸುಳ್ಳು ಸಾಕ್ಷ್ಯ ನೀಡಿರುತ್ತಾನೆಂಬ ಮಟ್ಟಿಗೆ ಪಾಟೀಸವಾಲನ್ನು ನಿರ್ದೇಶಿಸಲಾಗಿರುತ್ತದೆ. ಆದಾಗ್ಯೂ, ವರ್ಗಾವಣೆಪಡೆದವನು, ಹಲವಾರು ವ್ಯಕ್ತಿಗಳಿಗೆ ಮೊತ್ತವನ್ನು ಪಾವತಿಸಿದ್ದಾನೆಂಬುದನ್ನು ಅವನಿಗೆ ತಿಳಿಸಲಾಗಿದೆಯೆಂದು ಗಮನಿಸಬೇಕಾಗಿರುತ್ತದೆ. ಡಿಕ್ರಿದಾರಕನ ಸಂದರ್ಭದಲ್ಲಿ ಹಣವನ್ನು ಬೇರೆ ಬೇರೆ ಉದ್ದೇಶಕ್ಕಾಗಿ ಸಂದಾಯ ಮಾಡಿದ್ದು, ಅದೆಲ್ಲಾ ಮಾರಾಟಕ್ಕೆ

ಸಂಬಂಧಿಸಿರುವುದಿಲ್ಲವೆಂಬುದೂ ಕಂಡು ಬಂದಿರುತ್ತದೆ. ಅಂಥ ತಿಳುವಳಿಕೆಯ ಮೂಲಕ, ಆ ಮೊತ್ತವನ್ನು ಸಂದಾಯ ಮಾಡಲಾಗಿರುವುದನ್ನು ಇಂಗಿತಾರ್ಥದಲ್ಲಿ ಒಪ್ಪಿಕೊಂಡಿದ್ದು, ವಾಸ್ತವವಾಗಿ, ಅದನ್ನು ವಿವಿಧ ಉದ್ದೇಶಕ್ಕಾಗಿ ನೀಡಲಾಗಿತ್ತೆಂದೂ, ಆದರೆ ವರ್ಗಾವಣೆ ಪಡೆದವನು, ಹಣವನ್ನು ಸಾಲ ಕೊಡುವವನೆಂದೂ ಮತ್ತು ಸಾಲ ಕೊಡುವವರ ಪೈಕಿ ಸಹ ಒಬ್ಬನಾಗಿದ್ದಾನೆಂದೂ ಪ್ರಶ್ನಿತ ವ್ಯವಹರಣೆಯನ್ನು, ಅದರ ಮರುಪಾವತಿಗೆ ಬದಲಾಗಿ ಮಾಡಲಾಗಿದೆಯೆಂಬ ವಾಸ್ತವವನ್ನು ಅರಿಯಬಹುದಾಗಿರುತ್ತದೆ.

20. ಆ ಹಿನ್ನೆಲೆಯಲ್ಲಿ, ಪ್ರತ್ಯರ್ಜಿದಾರ ಸಾಕ್ಷ್ಯ.1 ಆಗಿ ಡಿಕ್ರಿದಾರನ ಸಾಕ್ಷ್ಯವನ್ನು ಪರಿಶೀಲಿಸಿದ್ದು, ಆ ಪರಿಶೀಲನೆಯಿಂದ, ಇತರರ ಪೈಕಿ, ತೀರ್ಪಿನ ಋಣಿಯು, ಆ ಸ್ಥಳವನ್ನು ಬಿಟ್ಟಿದ್ದಾನೆ ಮತ್ತು ಬೆಂಗಳೂರಿಗೆ ಸ್ಥಳಾಂತರಿಸಿರುತ್ತಾನೆಂಬುದನ್ನು ತಿಳಿದುಬಂದಿರುತ್ತದೆ. ಅಂತೆಯೇ ಈತ, ಜಾರಿ ನಡಾವಳಿಯಲ್ಲಿ ಮಾರಾಟಕ್ಕೆ ಸಂಬಂಧಿಸಿದಂತೆ ಪ್ರಶ್ನಿತ ಸ್ವತ್ತು ಲಭ್ಯವಾಗದಿರುವಲ್ಲಿ ಈತ ಸಹ ವಸೂಲಾತಿ ಪ್ರಕ್ರಿಯೆಗೆ ಲಭ್ಯವಾಗುವುದಿಲ್ಲ. ವಾಸ್ತವವಾಗಿ ವರ್ಗಾವಣೆ ಪಡೆದವನು, ಸ್ವತಃ 2007ನೇ ವರ್ಷದಲ್ಲಿ ಮಾಡಿಕೊಂಡ ಕ್ರಯಪತ್ರಕ್ಕನುಸಾರವಾಗಿ ಆ ಸ್ವತ್ತಿನ ಅಧಿಭೋಗದಲ್ಲಿರುತ್ತಾನೆಂಬುದನ್ನು ಅದು ಸೂಚಿಸುತ್ತದೆ. ಹಾಗಾಗಿ, ಯಾವುದೇ ಸಂದರ್ಭದಲ್ಲಿ ರೆವಿನ್ಯೂ ದಾಖಲೆಗಳು ವರ್ಗಾವಣೆಕಾರನ ಹೆಸರಿನಲ್ಲಿ ಇರುವುದು ಮುಂದುವರೆಯುವುದನ್ನು ಗಮನದಲ್ಲಿಟ್ಟುಕೊಂಡು ಪ್ರತ್ಯರ್ಜಿದಾರ ಸಾಕ್ಷ್ಯ.1ರಲ್ಲಿಯೂ ಸಹ ಪರಿಗಣಿಸದೇ ಇರುವುದರಿಂದ ಮೋಸದ ವ್ಯವಹರಣೆಯಂತೆ ಅದನ್ನು ಪರಿಗಣಿಸಲಾಗದು.

21. ಪ್ರತ್ಯರ್ಜಿದಾರ ಸಾಕ್ಷ್ಯ.1 ಕ್ಲೇಮನ್ನು ವಿಫಲಗೊಳಿಸಲು ವರ್ಗಾವಣೆದಾರನು, ಒಪ್ಪಂದವನ್ನು ಮಾಡಿಕೊಂಡಿದ್ದಾನೆ ಮತ್ತು ಜಫ್ತಿ ಮಾಡುವ ಬಗ್ಗೆ ತಿಳಿದಿದ್ದರೂ, ಆ ಸ್ವತ್ತನ್ನು ಮಾರಾಟ ಮಾಡಿದ್ದು, ಆದರೆ ಅಂಥ ಯಾವುದೇ ಸಂಚು ಇದ್ದಲ್ಲಿ ವರ್ಗಾವಣೆ ಪಡೆದವನು ಅದರ ಭಾಗವಾಗಿರುವುದನ್ನು ಸೂಚಿಸಲು ಯಾವುದೇ ವಾಸ್ತವಾಂಶ ಇಲ್ಲ ಎಂಬುದನ್ನು ಸೂಚಿಸುತ್ತದೆ. ವರ್ಗಾವಣೆ ಪಡೆದವನು ತನ್ನ

ಸ್ವತ್ತು ಖರೀದಿಯನ್ನು ಸಂರಕ್ಷಿಸಲು ಪ್ರಯತ್ನಿಸಿದ್ದಾನೆ ಮತ್ತು ಪ್ರಾರಂಭಿಕ ಹೊರೆ ಸಾಲ ಕೊಡುವವನ ಮೇಲೆ ಇದೆ. ವರ್ಗಾವಣೆ ಪಡೆದವನು, ವರ್ಗಾವಣೆದಾರನೊಂದಿಗೆ ಶಾಮಿಲಾಗಿ, ತನ್ನ ಕ್ಲೇಮುನ್ನು ವಿಫಲಗೊಳಿಸಲು ವ್ಯವಹರಣೆಯನ್ನು ಮಾಡಿಕೊಂಡಿರುವನೆಂಬುದರ ಬಗ್ಗೆ ಪ್ರತ್ಯರ್ಜಿದಾರ ಸಾಕ್ಷಿ.1 ಸಾಕಷ್ಟು ಸಾಕ್ಷ್ಯವನ್ನು ನೀಡಬೇಕಾದದ್ದು ಅಗತ್ಯವಾಗಿದೆ. ಮುಖ್ಯ ವಿವರಗಳೊಂದಿಗಿನ ಆರೋಪಿತ ವಂಚನೆಗೆ ಆಕ್ಷೇಪಣೆ ಹಾಗೂ ಸಾಕ್ಷ್ಯದ ರೂಪದಲ್ಲಿ ಆ ಮಟ್ಟಿಗೆ ನಿರ್ದಿಷ್ಟ ವಾದವಿಲ್ಲದಿರುವಾಗ ***ರಾಮಚಂದ್ರ ಸಿಂಗ್–ವಿರುದ್ಧ– ಸಾವಿತ್ರಿ ದೇವಿ ಮತ್ತು ಇತರರು*** [5], ಪ್ರಕರಣದ ಪ್ರತ್ಯರ್ಜಿದಾರನ ಪರವಾಗಿ ಮಾನ್ಯ ನ್ಯಾಯವಾದಿಯು ಇಟ್ಟ ಅವಲಂಬನೆಯು ನೆರವಿಗೆ ಬರುವುದಿಲ್ಲ.

22. ವರ್ಗಾವಣೆ ಪಡೆದವನಿಗೆ, ದಾವೆಯ ಇತ್ಯರ್ಥದ ತಿಳುವಳಿಕೆಯಿದ್ದರೂ, ಕ್ರಯಪತ್ರವನ್ನು ಪಡೆದುಕೊಳ್ಳಲಾಗಿದ್ದ ಜಫ್ತಿ ಆದೇಶವು ಆರ್4 ಮತ್ತು ಆರ್5 ನಿಶಾನೆಗಳನ್ನು ಆಧರಿಸಿರುತ್ತವೆ ಎಂದರೆ, ದಿನಾಂಕ 16.08.2006ರ ನೋಟೀಸನ್ನು ದಾವೆಯ ಇತ್ಯರ್ಥ ಮತ್ತು ಅದರಲ್ಲಿ ಮಾಡಿದ ಜಫ್ತಿಯನ್ನು ಕುರಿತಂತೆ ವರ್ಗಾವಣೆ ಪಡೆದವನಿಗೆ ತಿಳಿಸಲು ಡಿಕ್ರಿದಾರನ ಪರವಾಗಿ ವಕೀಲರು ನೀಡಿರುತ್ತಾರೆಂದು ವಾದಿಸಿರುವುದು ಡಿಕ್ರಿಧಾರಕನು ಮಾಡಿದ ಗಮನಾರ್ಹ ಪ್ರಯತ್ನವಾಗಿದೆ. ನಿಶಾನೆ ಆರ್.5, ನಿಶಾನೆ ಆರ್.4ರಲ್ಲಿ ನೋಟೀಸ್‌ನ್ನು ಕಳುಹಿಸಲಾಗಿದೆಯೆಂದು ವಾದಿಸಲು ಕೋರಿ ಸಲ್ಲಿಸಿದ ಪ್ರಮಾಣ ಪತ್ರವಾಗಿದೆ. ವರ್ಗಾವಣೆ ಪಡೆದವನು, ಅಂಥ ನೋಟೀಸ್ ಸ್ವೀಕಾರವನ್ನು, ನೇರವಾಗಿ ಅಲ್ಲಗಳೆದಿದ್ದಾನೆ ಮತ್ತು ಸೂಚಿಸಲಾದ ವಿಳಾಸವು, ಅವನಿಗೆ ಸಂಬಂಧಪಡುವುದಿಲ್ಲವೆಂದು ವಾದಿಸಲಾಗಿದೆ. ಆದಾಗ್ಯೂ, ಅಧೀನ ನ್ಯಾಯಾಲಯಗಳು, ಅವನು ತಾನಾಗಿಯೇ ಅದರಲ್ಲಿ ಸೂಚಿಸಲಾದ ವಿಳಾಸವು ಯುಕ್ತವಾಗಿಲ್ಲವೆಂದು ಹೇಳಿದ್ದಾಗ್ಯೂ, ಅವನ ಮೇಲೆ ಅದನ್ನು ಜಾರಿ ಮಾಡಲಾಗಿದೆಯೆಂದು ಭಾವಿಸಿರುತ್ತದೆ. ನಿಶಾನೆ ಆರ್.4 ಮತ್ತು ಆರ್.5 ರಲ್ಲಿರುವ ದಸ್ತಾವೇಜುಗಳನ್ನು ಪರಿಶೀಲಿಸಲಾಗಿದ್ದು, ಸದರಿ ದಸ್ತಾವೇಜುಗಳನ್ನು, ತರುವಾಯ

5. (2003)8 ಎಸ್‌ಸಿಸಿ 319

ಇಂಥದೇ ದಸ್ತಾವೇಜನ್ನು ಸೃಷ್ಟಿಸಲು ಅದನ್ನು ರೂಪಿಸಿದ ದತ್ತಕವಾಗಿರಬಹುದೆಂಬ ಗಂಭೀರ ಸಂದೇಹವು ಉದ್ಭವವಾಗುತ್ತದೆಂಬುದು ನನ್ನ ಅಭಿಪ್ರಾಯವಾಗಿರುತ್ತದೆ.

23. ನನ್ನ ಈ ಅಭಿಪ್ರಾಯಕ್ಕೆ ಕಾರಣವೇನೆಂದರೆ ಮೊದಲನೆಯದಾಗಿ, ಪ್ರಸ್ತುತ ಸ್ವರೂಪದ ವಿಷಯದಲ್ಲಿ, ಜಪ್ತಿಯನ್ನು ದಿನಾಂಕ: 01.07.2004ರಂದು ಮಾಡಿದ್ದರೂ ದಿನಾಂಕ: 16.08.2006ರಂದು ನೋಟೀಸ್‌ನ್ನು ಹೊರಡಿಸಲಾಗಿದೆಯೆಂದು ಹೇಳಿರುವುದಾಗಿದೆ. ಈ ಹಂತದಲ್ಲಿ ಆ ರೀತಿಯಲ್ಲಿ ನೋಟೀಸನ್ನು ಹಠಾತ್ತಾಗಿ ನೀಡಿರುವುದಕ್ಕೆ ಹಾಗೂ ವರ್ಗಾವಣೆ ಪಡೆದವನು ಆ ಸ್ವತ್ತನ್ನು ಖರೀದಿಸುವ ಉದ್ದೇಶವನ್ನು ಹೊಂದಿದ್ದಾನೆಂಬುದನ್ನು ಡಿಕ್ರಿದಾರಕನು ತಿಳಿದ ಬಗೆಯನ್ನು ತೃಪ್ತಿಕರವಾಗಿ ವಿವರಿಸಿರುವುದಿಲ್ಲ. ಎರಡನೆಯದಾಗಿ, ನಿಶಾನೆ ಆರ್.5ರಲ್ಲಿರುವ ವರ್ಗಾವಣೆ ಪಡೆದವನ ಹೆಸರನ್ನು (ಸರ್ಟಿಫಿಕೆಟ್ ಆಫ್ ಪೋಸ್ಟಿಂಗ್) ತರುವಾಯ ಸೇರಿಸಿರುವುದು ಸ್ಪಷ್ಟವಾಗಿ ಎದ್ದು ಕಾಣಿಸುತ್ತದೆ. ಮೂರನೆಯದಾಗಿ, ನಿಶಾನೆ ಆರ್.5ರಲ್ಲಿ ಮೊದಲನೇ ವಿಳಾಸದಾರನು, ಪ್ರಸ್ತುತ ವ್ಯವಹರಣೆಯ ಪಕ್ಷಕಾರನಾಗಿರುವಂಥ ವ್ಯಕ್ತಿಯಾಗಿರುವುದಿಲ್ಲ ಮತ್ತು ನಿಯೋಜನಾ ಪ್ರಮಾಣ ಪತ್ರವನ್ನು, ರುಜುವಾತು ಪಡಿಸುವ ಸಾಕ್ಷ್ಯದಂತೆ ಹಾಜರು ಪಡಿಸಬೇಕಾದ ಅವಶ್ಯಕತೆಯಿರುವಾಗ ರವಾನೆದಾರನು ಒಬ್ಬನಾಗಿದ್ದ ಮಾತ್ರಕ್ಕೆ ಒಂದೇ ಪ್ರಮಾಣ ಪತ್ರದ ಅಡಿಯಲ್ಲಿ ಸಂಪೂರ್ಣವಾಗಿ ಸಂಬಂಧಪಡದ ವ್ಯಕ್ತಿಗಳಿಗೆ ಬೇರೆ ಬೇರೆ ಸಂದರ್ಭಗಳಲ್ಲಿ ಎರಡು ಬೇರೆ ಬೇರೆ ನೋಟೀಸ್‌ಗಳನ್ನು ವಕೀಲರು ಹೇಗೆ ಕಳುಹಿಸಿದರು ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗಿದೆ. ಆದ್ದರಿಂದ, ಶ್ರೀ ಹೆಚ್.ಎಂ. ಲಿಂಗರಾಜು ರವರಿಗೆ ನೀಡಿದ ಲಭ್ಯವಾದಂಥ ನಿಯೋಜನಾ ಪ್ರಮಾಣ ಪತ್ರದ ಸಂಬಂಧದಲ್ಲಿ, ನೋಟೀಸ್ ಪ್ರತಿಯನ್ನು ಸೃಜಿಸುವುದರ ಮೂಲಕ ಅದರಲ್ಲಿ ವರ್ಗಾವಣೆ ಪಡೆದವನ ವಿಳಾಸವನ್ನು ಸೇರಿಸಿ ಅದನ್ನು ಉಪಯೋಗ ಮಾಡಿಕೊಳ್ಳಲಾಗಿದೆ ಎಂಬುದು ಕಂಡು ಬರುತ್ತದೆ. '1' ಎಂಬ ಸಂಖ್ಯೆಯು '2' ಎಂದು ಮಾರ್ಪಾಟು ಮಾಡಲಾಗಿರುವ ಅದೇ ಪ್ರಮಾಣ ಪತ್ರದಲ್ಲಿ ಕೈ ಬರಹದ ಹಿಂಬರಹದಿಂದ ಅದು ಸ್ಪಷ್ಟವಾಗಿರುತ್ತದೆ. ಮುಂದುವರೆದು ಪ್ರಮಾಣ ಪತ್ರವನ್ನು ಅಸಲಿಯೆಂದು ಅಂಗೀಕರಿಸಿದಲ್ಲಿ ಮಾತ್ರ ವಿಲೆ ಮಾಡಿರುವುದಕ್ಕೆ ಸಂಬಂಧಿಸಿದ

ಸಾಕ್ಷ್ಯದಂತೆ ವರ್ತಿಸಬಲ್ಲದಾಗಿರುತ್ತದೆಯೇ ಹೊರತು ಕಳುಹಿಸಿದುದಕ್ಕೆ ಸಂಬಂಧಿಸಿದ ಸ್ವೀಕೃತಿಯಾಗಿರುವುದಿಲ್ಲ. ಯಾವುದೇ ಸಾಕ್ಷ್ಯವನ್ನು ಅಂಚೆ ಅಧಿಕಾರಿಗಳಿಂದ ನೀಡಲಾದ ಹಿಂಬರಹದ ರೀತಿಯಲ್ಲಾಗಲಿ ಅಥವಾ ವರ್ಗಾವಣೆ ಪಡೆದವನಿಗೆ ನೀಡಲಾಗಿದೆಯೆಂದು ತೋರಿಸಲಾದ ಯಾವುದೇ ಇತರೇ ರೀತಿಯಲ್ಲಾಗಲಿ ಹಾಜರುಪಡಿಸಿರುವುದಿಲ್ಲ. ಸಾಮಾನ್ಯ ಪರಿಸ್ಥಿತಿಯಲ್ಲಿ, ಅಂಥ ನೋಟೀಸ್‌ನ್ನು, ವಕೀಲರ ಚೇಂಬರ್ಸ್‌ನಿಂದ ನೀಡಲಾಗಿದ್ದಲ್ಲಿ, ಅದನ್ನು ನಿಶ್ಚಿತವಾಗಿ, ಯುಕ್ತವಾದ ನೋಂದಾಯಿತ ಅಂಚೆ ಸ್ವೀಕೃತಿಯಡಿಯಲ್ಲಿಯೇ ಕಳುಹಿಸಲಾಗಿರುತ್ತದೆ. ಹಾಗಾಗಿ, ಆ ವಿಳಾಸದಲ್ಲಿನ ಸಂದಿಗ್ಧತೆಯು ಸೇರಿದಂತೆ ಹಾಗೇ ಕೆಲವು ವ್ಯತ್ಯಾಸಗಳಿರುವಾಗ, ಅಂಥ ನೋಟೀಸ್‌ನ್ನು ವರ್ಗಾವಣೆ ಪಡೆದವನ ಮೇಲೆ ಜಾರಿ ಮಾಡಿರುವುದಿಲ್ಲ ಮತ್ತು ಅಂಥ ದಸ್ತಾವೇಜಿನ ಮೂಲಕ ವರ್ಗಾವಣೆ ಪಡೆದವನಿಗೆ ತಿಳುವಳಿಕೆಯನ್ನು ನೀಡಲಾಗಿದೆಯೆಂಬುದನ್ನು ಒಪ್ಪಿಕೊಳ್ಳಲಾಗುವುದಿಲ್ಲವೆಂದು ಅಭಿಪ್ರಾಯಪಡಬಹುದಾಗಿರುತ್ತದೆ.

24. ಸ್ವತ್ತು ವರ್ಗಾವಣೆ ಅಧಿನಿಯಮದ 53ನೇ ಪ್ರಕರಣದ ಅಡಿಯಲ್ಲಿ ಸಾಲ ಕೊಡುವವನಿಗೆ ಸಂರಕ್ಷಣೆಯನ್ನು, ನ್ಯಾಯ, ಸಮಾನತೆ ಮತ್ತು ಚಿತ್ತ ಶುದ್ಧಿಯ ನಿಯಮದಂತೆ ಅನ್ವಯವಾಗಬಹುದಾಗಿರುತ್ತದೆ. ಅಂಥ ಪ್ರಯೋಜನವನ್ನು ಕೋರುವಂತವರು, ನಿಷ್ಕಳಂಕ ಮತ್ತು ಚಿತ್ತಶುದ್ಧಿಯಿಂದ ಈ ನ್ಯಾಯಾಲಯದ ಕದ ತಟ್ಟಬೇಕಾಗಿರುತ್ತದೆ. ಆದಾಗ್ಯೂ, ವರ್ಗಾವಣೆಯು, ಸದ್ಭಾವನೆ ಹೊಂದಿರದಿದ್ದಲ್ಲಿ, ಪ್ರಸ್ತುತ ಸಂದರ್ಭಗಳಲ್ಲಿ ಡಿಕ್ರಿದಾರನು ಪ್ರಯೋಜನ ಪಡೆಯಲು ಹಕ್ಕುಳ್ಳವನಾಗಿರುವುದಿಲ್ಲವೆಂದು ವಾದಿಸಿರುವಂತೆ ದಾವೆ ಮತ್ತು ಜಫ್ತಿಯ ಇತ್ಯರ್ಥವನ್ನು ಕುರಿತಂತೆ ವರ್ಗಾವಣೆ ಪಡೆದವನನ್ನು ಗುರುತಿಸುವ ಬಗ್ಗೆ ನಂಬಿಕೆ ಬರುವಂತೆ ವಾದವನ್ನು ಮಂಡಿಸಿ ಡಿಕ್ರಿದಾರಕನು ಕೋರಿದ ರೀತಿಯನ್ನು ಗಮನಿಸಲಾಗಿದೆ. ಅಧೀನ ನ್ಯಾಯಾಲಯಗಳ ವಿಶ್ಲೇಷಣೆಯು ನೋಟೀಸ್‌ನ್ನು ಜಾರಿ ಮಾಡಲಾಗಿದ್ದು, ಅದರಿಂದ ವರ್ಗಾವಣೆಯು ದೋಷಪೂರಿತವಾಗಿದ್ದು ಅದನ್ನು ಸಮರ್ಥಿಸಿಕೊಳ್ಳಲಾಗದೆಂಬ ನಿರ್ಣಯಕ್ಕೆ ಬಂದಿರುತ್ತದೆ.

25. ಇದರೊಂದಿಗೆ, ಅಧೀನ ನ್ಯಾಯಾಲಯಗಳು, ಆ ದಾವೆಯನ್ನು ಸಲ್ಲಿಸಿದ ಸಮಯದ ಬಗ್ಗೆ ಹಾಗು ತರುವಾಯ ನೋಂದಣಿಯಾಗಲಿರುವ ಮಾರಾಟ ಒಪ್ಪಂದದ ಬಗೆಗೆ ಸಾಕಷ್ಟು ವಿಷಯಗಳನ್ನು ರೂಪಿಸಿರುತ್ತದೆ. ಮಾಡಲಾದ ಊಹೆಯನ್ನು ಹೊರತುಪಡಿಸಿದಂತೆ, ದಿನಾಂಕ: 01.07.2004 ಆ ದಾವೆಯನ್ನು ಸಲ್ಲಿಸಿರುವುದು, ವರ್ಗಾವಣೆಕಾರನಿಗೆ, ತಿಳಿದಿತ್ತೆಂಬುದರ ಬಗ್ಗೆ ಮತ್ತು ವರ್ಗಾವಣೆ ಪಡೆದವನನ್ನು ಸಹ ಉಪೇಕ್ಷಿಸಲಾದ ಬಗ್ಗೆ ಕೂಡ ಯಾವುದೇ ಸಾಕ್ಷ್ಯ ಇರುವುದಿಲ್ಲ. ಆದ್ದರಿಂದ ಒಪ್ಪಂದವನ್ನು, ಅದೇ ದಿನದಂದು ನೋಂದಾಯಿಸಲಾಗಿರುತ್ತದೆ. ನೋಂದಣಿಯನ್ನು ಆ ಉದ್ದೇಶಕ್ಕಾಗಿ ಮಾಡಲಾಗಿದೆಯೆಂದು ಭಾವಿಸಿಕೊಂಡಿದ್ದಲ್ಲಿ ಮತ್ತು ಮಾರಾಟ ಹಣವನ್ನು ಡಿಕ್ರಿದಾರನಿಂದ ವಾದಿಸಿದಂತೆ ಸಂದಾಯ ಮಾಡದಿದ್ದಲ್ಲಿ, ತರುವಾಯ ಸ್ವತಃ ಕ್ರಯಪತ್ರವನ್ನು ನೋಂದಾಯಿಸಲಾಗುವುದಿಲ್ಲ ಮತ್ತು ಮಾರಾಟ ಒಪ್ಪಂದ ಪತ್ರವನ್ನು ಹಾಗೂ ತದನಂತರ ಕ್ರಯಪತ್ರವನ್ನು ನೋಂದಣಿ ಮಾಡುವ ಅಗತ್ಯವಿತ್ತೆ. ಇದಲ್ಲದೇ, ಅಧೀನ ನ್ಯಾಯಾಲಯಗಳಿಗೆ ದಿನಾಂಕ: 01.07.2004 ರಂದು ಒಪ್ಪಂದವನ್ನು ನೋಂದಾಯಿಸಲಾಗಿರುವುದರಿಂದ ದಿನಾಂಕ: 26.06.2004 ರಂದು ಮಾಡಿರುವ ಮುದ್ರಾಂಕ ಶುಲ್ಕದ ಸಂದಾಯವು ಆಕ್ಷೇಪಾರ್ಹವೆಂದು ಕಂಡು ಬಂದಿರುತ್ತದೆ ಮತ್ತು ದಿನಾಂಕ: 01.07.2004 ರಂದು ನೋಂದಣಿ ಶುಲ್ಕಗಳನ್ನು ಅವನು ಸಂದಾಯ ಮಾಡಿದ್ದಾನೆಂಬುದು ತನ್ನ ಪಾಟೀ ಸವಾಲಿನಲ್ಲಿ ಪ್ರಾಸಾ.1ರ ಹೇಳಿಕೆಯು ದೋಷಪೂರ್ಣವಾಗಿರುವುದು ಕಂಡು ಬಂದಿದೆ. ಆದಾಗ್ಯೂ, ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕದ ನಡುವಿನ ವಿಭಿನ್ನತೆಯನ್ನು ಗಮನಿಸುವುದು ಅಗತ್ಯವಾಗಿದೆ. ದಿನಾಂಕ 26.06.2004 ರಂದು 200/– ರೂಪಾಯಿಗಳ ಮೊತ್ತವನ್ನು, ಸ್ಟ್ಯಾಂಪ್ ಪೇಪರನ ಖರೀದಿಗಾಗಿ ಎಸ್‌ಬಿಎಂ ಬ್ಯಾಂಕ್ ಚಲನ್ ಮೂಲಕ ಸಂದಾಯ ಮಾಡಲಾಗಿದೆ ಮತ್ತು ಪ್ರಸ್ತಾವನೆಯನ್ನು ಮಾಡುವಾಗ ಆ ಹಂತದಲ್ಲಿ ಸ್ಟ್ಯಾಂಪ್ ಪೇಪರ್‌ನ ಅಂಥ ಖರೀದಿಯು, ತಪ್ಪಾಗಲಾರದು ಮತ್ತು ಮಾರಾಟ ವ್ಯವಹರಣೆಯನ್ನು ಇದ್ದಕ್ಕಿದ್ದ ಹಾಗೇ ಮಾಡಲಾಗದೆಂಬುದು ಸಾಮಾನ್ಯ ತಿಳುವಳಿಕೆಯಾಗಿದೆ. ವಾಸ್ತವವಾಗಿ, ಸಾಕ್ಷ್ಯದಲ್ಲಿ ಒತ್ತಿ ಹೇಳಿದಂತೆ ನೋಂದಣಿ ಶುಲ್ಕವಾಗಿ ನಿಶಾನೆ ಪಿ.1ನ್ನು ವಿಪರ್ಯಯಗೊಳಿಸಿದ ಮೇಲೆ ಕಂಡು ಬಂದಂತೆ 270/– ರೂಪಾಯಿಗಳ ಒಟ್ಟು ಮೊಬಲಗನ್ನು ದಿನಾಂಕ 01.07.2004 ರಂದು ಸಂದಾಯ ಮಾಡಲಾಗಿರುತ್ತದೆ.

26. ಆದ್ದರಿಂದ, ವೈರುದ್ಯದ ಊಹೆಗಳು ಮಾತ್ರವೇ ವ್ಯವಹರಣೆಯನ್ನು ರದ್ದುಗೊಳಿಸಿದಂತೆ ವಂಚನೆಯನ್ನು ರೂಪಿಸಲಾಗುವುದಿಲ್ಲ. ವಂಚನೆಯನ್ನು ಸಾಲ ಕೊಡುವವನು ಆಪಾದಿಸಿದ್ದಲ್ಲಿ, ಸಾಲಕೊಡುವವನೇ ಅದನ್ನು ರುಜುವಾತುಪಡಿಸಬೇಕಾಗಿರುತ್ತದೆ. ಇದು ವರ್ಗಾವಣೆಕಾರನ ನಡತೆಯಾಗಿರದೆ, ನಾವು, ಪ್ರಸ್ತುತ ಮೊಬಲಗಿಗೆ ಸಂಬಂಧಪಡುತ್ತೇವಾದರೂ, ವರ್ಗಾವಣೆಕಾರನು ಸದ್ಭಾವನೆಯಿಂದ ಪ್ರತಿಫಲಕ್ಕಾಗಿ ವ್ಯವಹರಣೆಯನ್ನು ಮಾಡಿಕೊಂಡಿದ್ದಲ್ಲಿ ಅವನ ಪ್ರಾಮಾಣಿಕತೆಯನ್ನು ಕಂಡುಕೊಳ್ಳಬೇಕಾಗುತ್ತದೆ. ಆದಾಗ್ಯೂ, ವ್ಯವಹರಣೆಯ ಸಂಶಯಾಸ್ಪದಗಳು, ನ್ಯಾಯಾಲಯಗಳ ತೀರ್ಮಾನಗಳಾಗಬಹುದಾದರೂ, ಅವುಗಳು ಸಂದೇಹಗಳನ್ನು ಅವಲಂಬಿಸದೆ ಕಾನೂನು ಕಾರಣಗಳ ಸಾಕ್ಷ್ಯವನ್ನು ಆದರಿಸಿರಬೇಕೆಂಬುದು ಸುಸ್ಥಾಪಿತವಾದ ಕಾನೂನಿನ ಸ್ಥಿತಿಯಾಗಿದೆ. ಪ್ರಸ್ತುತ ಪ್ರಕರಣದಲ್ಲಿ, ವರ್ಗಾವಣೆ ಪಡೆದವನು, ವರ್ಗಾವಣೆಕಾರನ ವಿರುದ್ಧ ಸಲ್ಲಿಸಲಾದ ಆ ದಾವೆಯ ತಿಳುವಳಿಕೆಯೊಂದಿಗೆ ವರ್ಗಾವಣೆಯನ್ನು ಪಡೆದುಕೊಳ್ಳಲು ಅವನೊಂದಿಗೆ ಶಾಮೀಲಾಗಿದ್ದಾನೆಂಬುದನ್ನು ರುಜುವಾತುಪಡಿಸುವ ಅಂಥ ಸಾಕ್ಷ್ಯವಿರುವುದಿಲ್ಲವೆಂದು ನಾನು ನಿರ್ಣಯಿಸಿದ್ದೇನೆ.

27. ಈ ಹಿನ್ನೆಲೆಯಲ್ಲಿ, ಮೇಲೆ ರೂಪಿಸಲಾದ ಹಾಗೂ ಗಮನಿಸಲಾದ ಕಾನೂನಿನ ಪ್ರಶ್ನೆಗೆ ದಿನಾಂಕ 01.07.2004ರಂದು ಒಪ್ಪಂದ ಮಾಡಿಕೊಂಡಿರುವುದನ್ನು ಇಲ್ಲಿನ ಪ್ರತ್ಯರ್ಜಿದಾರನ ಕ್ಲೇಮನ್ನು ವಿಫಲಗೊಳಿಸುವ ಉದ್ದೇಶದಿಂದ ತೋರಿಸಿರುವುದಿಲ್ಲವಾದ್ದರಿಂದ ಅಪೀಲುದಾರನ ಪರವಾಗಿ ಉತ್ತರಿಸಲಾಗಿರುತ್ತದೆ. ಅಂಥ ಉದ್ದೇಶಕ್ಕೆ ಪಕ್ಷಕಾರನಾಗಿರುವ ವರ್ಗಾವಣೆ ಪಡೆದವನು ಅಂಥ ಯಾವುದೇ ಸಂದರ್ಭವನ್ನು ಸುಸ್ಥಾಪಿಸಿರುವುದಿಲ್ಲ.

28. ತತ್ಪರಿಣಾಮವಾಗಿ ಈ ಮುಂದಿನಂತೆ ಆದೇಶಿಸಲಾಗಿರುತ್ತದೆ:

**ಆದೇಶ**

(i) ಐ.ಎ. ಸಂ.iv ಮತ್ತು vರ ಮೇಲಿನ ಸಂ.42/2008ರಲ್ಲಿನ ದಿನಾಂಕ: 31.07.2010ರ ಆದೇಶ ಅಲ್ಲದೆ, ಆರ್.ಎ. ಸಂ.195/ 2010ರಲ್ಲಿನ ದಿನಾಂಕ: 18.01.2011ರ ಆದೇಶಗಳನ್ನು ರದ್ದುಗೊಳಿಸಲಾಗಿದೆ.

(ii) ತತ್ಪರಿಣಾಮವಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ xxi ರ 58, 59 ಮತ್ತು 97ನೇ ನಿಯಮಗಳ ಅಡಿಯಲ್ಲಿ ಸಲ್ಲಿಸಲಾದ ಐ.ಎ.ಸಂಖ್ಯೆ: iv ಮತ್ತು ಅನ್ನು ಅಂಗೀಕರಿಸಲಾಗಿದೆ ಮತ್ತು ನಿಶಾನೆ ಸಂ.42/2008ರಲ್ಲಿನ ದಿನಾಂಕ 12.04.2007ರ ಕ್ರಯಪತ್ರದ ಅಡಿಯಲ್ಲಿ ಇಲ್ಲಿನ ಅಪೀಲುದಾರನಿಂದ ಖರೀದಿ ಮಾಡಲಾದ ಆ ಸ್ವತ್ತಿನ ಮಾರಾಟವನ್ನು, ಅನುಮತಿಸಲಾಗುವುದಿಲ್ಲ.

(iii) ಈ ಅಪೀಲನ್ನು, ಮೇಲ್ಕಂಡ ನಿರ್ಬಂಧನೆಗಳಲ್ಲಿರುವಂತೆ ಅಂಗೀಕರಿಸಲಾಗಿದೆ.

(iv) ಪಕ್ಷಕಾರರು, ತಮ್ಮ ಸ್ವಂತ ಖರ್ಚಿನಲ್ಲೇ ವೆಚ್ಚಗಳನ್ನು ಭರಿಸುವುದು.